ಬೆಲೆ ರೂ.2.50
D.O.P - 15th of every month at Udupi Sorting Office




# ಶ್ರೀ ಶಾರದಾ

ಮಾಸಪತ್ರಿಕೆ – 15 ಸಪ್ಟೆಂಬರ್ 2016

॥ ಧಿಯೋ ಯೋನಃ ಪ್ರಚೋದಯಾತ್ ॥

Regn.No.KAR/KAN/2000/2758 ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಶ್ರೀ ಶಾರದಾ ಮಂಟಪ, ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ – 576 102. ☎ 2520754
ಸಂಪುಟ-16 ಸಂಚಿಕೆ-9 ಪುಟಗಳು-10 Registered Under No.UDP/1260/2015-2017 Licenced to Post without Prepayment WPP No. SK/WPP/UDP/81/15-17

## ಶೃಂಗೇರಿಯಲ್ಲಿ ಗುರುಗಳ ಭೇಟಿ : ಆಶೀರ್ವಚನ







ದಕ್ಷಿಣಾಮ್ನಾಯ ಶೃಂಗೇರಿ ಶ್ರೀ ಶಾರದಾ ಪೀಠದ ಪರಂಪರಾಗತ ಶಿಷ್ಯರಾದ ಸ್ಥಾನಿಕ ಬ್ರಾಹ್ಮಣರು ಪ್ರತೀ ವರ್ಷವೂ ಚಾತುರ್ಮಾಸ್ಯ ಸಮಯದಲ್ಲಿ ಶ್ರೀ ಶ್ರೀ ಶೃಂಗೇರಿ ಜಗದ್ಗುರುಗಳವರನ್ನು ಭೇಟಿ ಮಾಡಿ ಆಶೀರ್ವಾದ ಪಡೆಯುವುದು ಹಲವು ದಶಕಗಳಿಂದ ನಡೆದುಕೊಂಡು ಬಂದಿರುವ ಸಂಪ್ರದಾಯವಾಗಿದೆ. ಶ್ರೀ ಶ್ರೀಗಳವರು ಕರಾವಳಿ ಭಾಗದ ತಮ್ಮ ಪ್ರಮುಖ ಶಿಷ್ಯರಾದ ಸ್ಥಾನಿಕ ಬ್ರಾಹ್ಮಣರಿಗೆ ಪ್ರತೀ ವರ್ಷ ಗಣೇಶ ಚತುರ್ಥಿಯ ಹಿಂದಿನ ಆದಿತ್ಯವಾರವನ್ನು ತಮ್ಮ ಭೇಟಿಗೆ ಬರುವ ದಿನವೆಂದು ನಿಗದಿ ಪಡಿಸಿರುವರು. ಆದುದರಿಂದ ಆ ದಿನ ದೇಶ ವಿದೇಶಗಳಲ್ಲಿರುವ ಸ್ಥಾನಿಕ ಬ್ರಾಹ್ಮಣರು ಯಾವುದೇ ಆಮಂತ್ರಣದ ಅಗತ್ಯವಿಲ್ಲದೆ ಗುರುಗಳ ಭೇಟಿಗಾಗಿ ಶೃಂಗೇರಿಗೆ ಆಗಮಿಸುವರು. ಆದರೆ ಈ ವರ್ಷ ಚೌತಿಯ ಹಿಂದಿನ ಆದಿತ್ಯವಾರ ಏಕಾದಶಿಯಾಗಿದ್ದು ಗುರುಗಳು ಮೌನವ್ರತ ಆಚರಿಸುವುದರ ನಿಮಿತ್ತ ಆದಿತ್ಯವಾರದ ಬದಲು ಶನಿವಾರ ಗುರುಗಳ ಭೇಟಿಯೆಂದು ನಿಶ್ಚಯಿಸಲಾಗಿತ್ತು. ಅಂತೆಯೇ ತಾ.27-08-2016ನೇ ಶನಿವಾರ ನಮ್ಮ ಸಮಾಜದ ವಿವಿಧ ಸಂಘಗಳ ಉಸ್ತುವಾರಿಯಲ್ಲಿ ಸುಮಾರು ಎರಡು ಸಾವಿರದಷ್ಟು ಸಮಾಜಬಾಂಧವರು ಗುರುದ್ವಯರನ್ನು ಭೇಟಿ ಮಾಡಿ ಪಾದಪೂಜೆ ಭಿಕ್ಷಾವಂದನೆಗಳನ್ನು ಸಲ್ಲಿಸಿ ಆಶೀರ್ವಚನವನ್ನು ಆಲಿಸಿ ಮಂತ್ರಾಕ್ಷತೆ ಪಡೆದರು.

ಉಡುಪಿಯಿಂದ ಸುಮಾರು ಎಂಬತ್ತು ಜನ ಸಮಾಜಬಾಂಧವರು ಸಂಘದ ವತಿಯಿಂದ ವಾಹನದಲ್ಲಿ ಗುರುಗಳ ಭೇಟಿಗಾಗಿ ತೆರಳಿದ್ದರು. ಪ್ರಯಾಣವು ಬೆಳಿಗ್ಗೆ ಏಳುಗಂಟೆಗೆ ಶ್ರೀ ಶಾರದಾ ಮಂಟಪದಿಂದ ಆರಂಭ ವಾಯಿತು. ಹೆಬ್ರಿಯಲ್ಲಿ ಬೆಳಗ್ಗಿನ ಉಪಾಹಾರದ ವಿರಾಮದ ನಂತರ ಹರಟೆ, ಭಜನೆ ಅಂತ್ಯಾಕ್ಷರಿಗಳೆಲ್ಲವುಗಳ ನಡುವೆ ಸುಮಾರು ಹತ್ತುಗಂಟೆಗೆ ಬಸ್ಸು ಶೃಂಗೇರಿ ತಲುಪಿತು. ಅಲ್ಲಿ ನಮಗಾಗಿ ಕಾದಿರಿಸಿದ್ದ ವಸತಿಗೃಹದಲ್ಲಿ ತುಸು ದಣಿವಾರಿಸಿಕೊಂಡು ಶ್ರೀ ಶಾರದಾ ದೇವಸ್ಥಾನದ ಕಡೆಗೆ ಹೆಜ್ಜೆ ಹಾಕಿದೆವು. ಭವ್ಯವಾದ ಸ್ವಾಗತ ಗೋಪುರವನ್ನು ವೀಕ್ಷಿಸುತ್ತಾ ಮೊದಲಾಗಿ ಶ್ರೀ ಶಾರದಾ ದೇವಸ್ಥಾನಕ್ಕೆ ಭೇಟಿ ನೀಡಿದೆವು. ಮಹಿಳಾ ವೇದಿಕೆಯ ಸದಸ್ಯರು ಶ್ರೀ ಶಾರದಾಂಬೆಯ ಸನ್ನಿಧಿಯಲ್ಲಿ ಒಂದು ಗಂಟೆಯ ಕಾಲ ಲಲಿತಾ ಸಹಸ್ರನಾಮ ಹಾಗೂ ಸೌಂದರ್ಯಲಹರಿ ಪಾರಾಯಣ ಮಾಡಿದರು. ನಂತರ ವಿದ್ಯಾಶಂಕರ ದೇಗುಲ, ಆದಿಶಂಕರರ ಸನ್ನಿಧಿ, ತೋರಣ ಗಣಪತಿ ದೇವಸ್ಥಾನವನ್ನು ಸಂದರ್ಶಿಸಿ ತುಂಗಾನದಿಯಲ್ಲಿ ಕಾಲುತೊಳೆದು ಮೀನುಗಳಿಗೆ ಚುರುಮುರಿಯನ್ನು ತಿನ್ನಿಸಿ, ಅಲ್ಲೇ ಇರುವ ಸರ್ಪವು ಕಪ್ಪೆಗೆ ಅಶ್ರಯನೀಡಿದ್ದ ಸ್ಥಳಕ್ಕೆ ನಮಿಸಿ, ಸೇತುವೆಯನ್ನು ದಾಟಿ ನರಸಿಂಹ ವನಕ್ಕೆ ಹೋದೆವು. ಅಲ್ಲಿ ಬೆಂಗಳೂರು ಮೈಸೂರು, ಮುಂಬಯಿ, ಸುರತ್ಕಲ್ ಪಡುಬಿದ್ರೆ ಕಾರ್ಕಳ ಮಂಗಳೂರು ಕುಂದಾಪುರ ಇತ್ಯಾದಿ ಕಡೆಗಳಿಂದ ಆಗಮಿಸಿದ್ದ ಸಮಾಜಬಾಂಧವರನ್ನು ಕೂಡಿಕೊಂಡು ಗುರುಭವನದಲ್ಲಿ ಉಭಯ ಗುರುಗಳನ್ನು ಭೇಟಿಯಾದೆವು. ಸಂಘದ ವತಿಯಿಂದ ಹೊರೆಕಾಣಿಕೆ ಹಾಗೂ ಪಾದಪೂಜೆಯನ್ನು ಸಲ್ಲಿಸಲಾಯಿತು. ನಂತರ ಶ್ರೀ ಸತ್ಯಶಂಕರ ಬೊಳ್ಳಾವರ ನೇತೃತ್ವದಲ್ಲಿ ನಮ್ಮ ಸಮಾಜದ ಎಲ್ಲಾ ಸಂಘಗಳ ಹಾಗೂ ದೇವಳಗಳ ಪದಾಧಿಕಾರಿಗಳು ಒಂದಾಗಿ ನಿಂತು ಗುರುಗಳಿಗೆ ಸಮಷ್ಟಿಭಿಕ್ಷೆಯನ್ನು ಸಮರ್ಪಿಸಿದರು.

ಗುರುಗಳು ಸ್ಥಾನಿಕ ಬಾಂಧವರು ತಮ್ಮ ಪ್ರತಿಯೊಂದು ಕಾರ್ಯಕ್ರಮಗಳಿಗೆ ಮುಂಚಿತವಾಗಿ ತಮ್ಮನ್ನು ಭೇಟಿಯಾಗಿ ಆಶೀರ್ವಾದ ಪಡೆದೇ ಮುಂದುವರಿಯುತ್ತಿರುವುದು ತಮಗೆ ಬಹಳ ಸಂತೋಷವನ್ನುಂಟು ಮಾಡಿದೆ, ಹೀಗೆ ಸದಾಕಾಲ ಶೃಂಗೇರಿ ಗುರುಪೀಠದ ಸಂಬಂಧವನ್ನು ನೀವೆಲ್ಲರೂ ಬೆಳೆಸಿಕೊಂಡು ಹೋಗಬೇಕು ಎಂದು ತಮ್ಮ ಮನಪೂರ್ವಕ ಆಶೀರ್ವಾದಗಳನ್ನು ತಿಳಿಸಿದರು. ಆಶೀರ್ವಚನ ನಂತರ ನಮಗಾಗಿಯೇ ಪ್ರತ್ಯೇಕವಾಗಿ ಹಾಲ್‌ನಲ್ಲಿ ಏರ್ಪಡಿಸಿದ್ದ ಪ್ರಸಾದ ಭೋಜನವನ್ನು ಸ್ವೀಕರಿಸಿ ಸುಮಾರು ಮೂರುಗಂಟೆಗೆ ಉಡುಪಿಗೆ ಹಿಂದಿರುಗಲು ಅಣಿಯಾದೆವು. ಸೋಮೇಶ್ವರದ ಪ್ರಕೃತಿಯ ಮಡಿಲಲ್ಲಿ ಚಹಾವಿರಾಮದ ನಂತರ ಸುಮಾರು ಆರುಗಂಟೆಗೆ ಉಡುಪಿಯನ್ನು ತಲುಪಿದೆವು. ಉತ್ತಮವಾಗಿ ಮತ್ತು ವ್ಯವಸ್ಥಿತವಾಗಿ ಕಾರ್ಯಕ್ರಮವನ್ನು ಆಯೋಜಿಸಲು ಸಹಕರಿಸಿದ ಎಲ್ಲರಿಗೂ ಅಭಿವಂದನೆಗಳು.

## ಶ್ರೀ ಶಂಕರ ಪ್ರತಿಷ್ಠಾನ ಕಾರ್ಕಳ (ರಿ.) ವಾರ್ಷಿಕ ಮಹಾಸಭೆ




ಶ್ರೀ ಶಂಕರ ಪ್ರತಿಷ್ಠಾನ ಕಾರ್ಕಳ ಇದರ ಮಹಾಸಭೆಯು ಕೃಷ್ಣಕೃಪಾ ಸಭಾಭವನ, ಶ್ರೀ ವಿಶ್ವೇಶ್ವರ ವೇಣುಗೋಪಾಲ ದೇವಸ್ಥಾನ, ಅನಂತಶಯನದಲ್ಲಿ ರವಿವಾರ 31-7-2016ರಂದು ನಡೆಯಿತು. ಉಪಾಹಾರ ಹಾಗೂ ದೀಪ ಪ್ರಜ್ವಲನದ ನಂತರ 10 ಗಂಟೆಯಿಂದ 10-45ರ ವರೆಗೆ ಬಾಲಪ್ರತಿಭೆಯರಾದ ಕೀರ್ತನ, ಸಿಂಚನ, ಲಲಿತ, ಅರ್ಚನಾ, ಅದಿತಿ, ಮಿಹಿರ ಮೊದಲಾದ ಕುಮಾರಿಯವರಿಂದ ಭಕ್ತಿಗೀತೆ, ಭರತನಾಟ್ಯ ಹಾಗೂ ವಿವಿಧ ರೀತಿಯ ಮನರಂಜನೆಗಳು ನೆರವೇರಿದವು.

ಪ್ರಾರ್ಥನೆಯ ನಂತರ ಸಭಾ ಕಾರ್ಯಕ್ರಮ ಆರಂಭವಾಯಿತು. ಶ್ರೀ ವೈ. ಭುವನೇಂದ್ರ ರಾಯರು, ಅಧ್ಯಕ್ಷರು ಸ್ಥಾನಿಕ ಬ್ರಾಹ್ಮಣ ಸಂಘ,

(3ನೇ ಪುಟಕ್ಕೆ...)



### ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ, (ರಿ.)

ಶ್ರೀ ಶಾರದಾ ಮಂಟಪ, ಶ್ರೀಶಾರದಾ ನಗರ, ಕುಂಜಿಬೆಟ್ಟು,
ಉಡುಪಿ – 576 102.

**ಆಮಂತ್ರಣ**

ಮಾನ್ಯ ಸಮಾಜ ಬಾಂಧವರೇ,

ಸ್ವಸ್ತಿ! ಶ್ರೀ ದುರ್ಮುಖ ನಾಮ ಸಂವತ್ಸರದ ಕನ್ಯಾ ಮಾಸ ದಿನ ೨೫ ಸಲುವ ಅಶ್ವಯುಜ ಶುದ□(ದಶಮಿ) ೧೦ ಯು, ತಾ.11-10-2016ನೇ ಮಂಗಳವಾರ

**ವಿಜಯದಶಮಿ ದಿನದಂದು**

**ಶ್ರೀ ಚಂಡಿಕಾಯಾಗ ಮತ್ತು ಶ್ರೀ ಶಾರದಾ ಪೂಜಾ**

ಕಾರ್ಯಕ್ರಮವು ಶ್ರೀ ಶಾರದಾ ಮಂಟಪದಲ್ಲಿ ಜರಗಲಿದೆ.
ಸರ್ವರೂ ಬಂಧು-ಬಾಂಧವರೊಡಗೂಡಿ ಆಗಮಿಸಿ, ಪೂರ್ವಾಹ್ನ ಮತ್ತು ಅಪರಾಹ್ನದ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ಕಾರ್ಯಕ್ರಮವನ್ನು ಸಂಪನ್ನಗೊಳಿಸಬೇಕೆಂದು ಅಪೇಕ್ಷಿಸುತ್ತೇವೆ.

| ವೈ. ಭುವನೇಂದ್ರ ರಾವ್ | ಕೆ. ಸುಧಾಕರ್ ರಾವ್ | ಕೆ. ಸುರೇಶ್ ರಾವ್ |
| --- | --- | --- |
| ಅಧ್ಯಕ್ಷರು | ಕೋಶಾಧಿಕಾರಿ | ಕಾರ್ಯದರ್ಶಿ |

ಹಾಗೂ ಆಡಳಿತ ಮಂಡಳಿಯ ಸವಿನಯ ಆಮಂತ್ರಣ

## ಸಂಪಾದಕೀಯ.....

- ಡಾ। ವೈ. ಸುದರ್ಶನ್ ರಾವ್

ಸ್ಥಾನಿಕೇತರ ಬ್ರಾಹ್ಮಣರೊಂದಿಗೆ ವಿವಾಹ ಸಂಬಂಧಗಳ ಸಂಖ್ಯೆ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ನಮ್ಮ ಸಮಾಜದ ಒಗ್ಗಟ್ಟು ಹಾಗೂ ಅಸ್ತಿತ್ವವನ್ನು ಉಳಿಸಿಕೊಳ್ಳುವ ನಿಟ್ಟಿನಲ್ಲಿ ನಮ್ಮ ನಿಲುವೇನಿರಬೇಕು ಎಂಬ ವಿಷಯದ ಚರ್ಚೆಯ ಮೇಲೆ ಕಳೆದ ತಿಂಗಳು ಬರೆದಿದ್ದ ಸಂಪಾದಕೀಯದ ಮುಂದುವರಿದ ಭಾಗವಿದು. ಸ್ಥಾನಿಕರು ಇತರರಿಗೆ ಅಪಥ್ಯವಾಗಿದ್ದ ದಿನಗಳು ಕಳೆದು ಸ್ಥಾನಿಕರು “ಆಗಬಹುದು” ಎನ್ನುವ ದಿನಗಳು ಬಂದ ಕೂಡಲೇ ನಮ್ಮ ಹಿರಿಯರು ಅನುಭವಿಸಿದ ಕಷ್ಟ, ಅವಮಾನ ,ಮಾಡಿದ ತ್ಯಾಗ , ಸಮಾಜದ ಏಳಿಗೆಗಾಗಿ ನಡೆಸಿದ ಸಂಘಟಿತ ಪ್ರಯತ್ನಗಳನ್ನು ಕಡೆಗಣಿಸುವುದು ಸರಿಯಲ್ಲ, ಹಾಗೆಯೇ ಬ್ರಾಹ್ಮಣರೆಲ್ಲರೂ ಭೇದಭಾವ ಮರೆತು ಒಂದಾಗಬೇಕೆಂಬ ಕರೆಗೆ ಸ್ಪಂದಿಸದೇ ಬೆಕ್ಕಿನ ಬಿಡಾರ ಬೇರೆ ಎಂಬಂತಿರುವ ನೀತಿಯೂ ಈಗಿನ ಕಾಲಕ್ಕೆ ಖಂಡಿತಾ ಹೊಂದುವುದಿಲ್ಲ.

ಇಂತಹಾ ಕಠಿನ ಪ್ರಶ್ನೆಗೆ ಉತ್ತರವನ್ನು ಕಂಡುಕೊಳ್ಳುವ ಪ್ರಯತ್ನಕ್ಕೆ ಪೂರಕವಾಗಿ ಕರಾವಳಿಯ ಎಲ್ಲಾ ವರ್ಗದ ಬ್ರಾಹ್ಮಣರನ್ನು ಅವರ ಸಾಮಾಜಿಕ ಪರಿಸ್ಥಿತಿಯನ್ನು ಗಣನೆಗೆ ತೆಗೆದುಕೊಂಡು (ಬಡವರು, ಮಧ್ಯಮ ವರ್ಗದವರು, ಶ್ರೀಮಂತರು ಎಂದು ವರ್ಗೀಕರಿಸಿದಂತೆ) ಈ ರೀತಿಯಾಗಿ ವರ್ಗೀಕರಿಸಬಹುದು.

ಮೊದಲನೆಯದಾಗಿ ಸುಮಾರು ಅರುವತ್ತು ಎಪ್ಪತ್ತು ವರ್ಷಗಳಿಗಿಂತಲೂ ಹಿಂದೆಯೇ ಮಹಾನಗರಿಗಳಿಗೆ ವಲಸೆ ಹೋಗಿ ನೆಲೆನಿಂತವರು. ಇವರು ಮಹಾನಗರಿಗಳಲ್ಲಿ ನಾನಾಬಗೆಯ ಉದ್ಯೋಗಗಳನ್ನು ಕೈಗೊಂಡು ಈಗ ಅಲ್ಲಿ ಖಾಯಂ ನೆಲೆ ಕಂಡುಕೊಂಡಿದ್ದಾರೆ. ತಮ್ಮ ಸಂಸ್ಕೃತಿ, ಆಚಾರ ವಿಚಾರಗಳಿಗೆ ಸರಿಹೊಂದುವ ಗೆಳೆಯರನ್ನೂ ಮಾಡಿಕೊಂಡಿದ್ದಾರೆ. ಅವರ ಮಕ್ಕಳು ಅಲ್ಲಿಯೇ ಹುಟ್ಟಿ ಬೆಳೆದು ಅಲ್ಲಿಯೇ ಆಟವಾಡಿ ಕಲಿತು ಅಲ್ಲಿಯ ಗೆಳೆಯರೊಂದಿಗೆ ಸೇರಿಕೊಂಡು ಅಲ್ಲಿಯವರೇ ಆಗಿಬಿಟ್ಟಿದ್ದಾರೆ. ಆಗಾಗಲೊಮ್ಮೆ ಊರಿನಲ್ಲಿರುವ ಮನೆಯ ಕಾರ್ಯಕ್ರಮಗಳಿಗೋ ಅಥವಾ ಊರಿನ ಉತ್ಸವಕ್ಕೋ ಭಾಗಿಯಾಗಲು ಊರಿಗೆ ಬರುತ್ತಾರೆ. ಇವರಿಗೆ ವಿದ್ಯಾಭ್ಯಾಸ ಹಾಗೂ ವೃತ್ತಿಜೀವನಕ್ಕೆ ಹೆಚ್ಚಿನ ಮಹತ್ವ. ಇವರ ಧಾರ್ಮಿಕ ಆಚರಣೆಗಳುಅವರ ಮನೆಯೊಳಗೇ ಸೀಮಿತವಾಗಿವೆ. ಮಹಾನಗರಿಯಲ್ಲಿ ಭೇಟಿ ನೀಡುವ ದೇವಸ್ಥಾನಗಳ ಅರ್ಚಕರೂ ಆಡಳಿತದವರೂ ಅಲ್ಲಿಯವರೇ ಆಗಿರುವುದರಿಂದ ಕರಾವಳಿಯಿಂದ ಹೋದ ಎಲ್ಲಾ ವರ್ಗದ ಬ್ರಾಹ್ಮಣರಿಗೆ ಸಿಗುವ ಸ್ಥಾನಮಾನ ಇತರ ಭಕ್ತರಷ್ಟೇ ಆಗಿರುವಾಗ ಭೇದ ಭಾವವಾಗಲೀ, ಮೇಲು ಕೀಳು ಭಾವನೆಗಳಿಗಾಗಲೀ ಅಲ್ಲಿ ಇಲ್ಲ. ಇದ್ದರೂ ಅದರ ಪ್ರದರ್ಶನಕ್ಕೆ ಅಲ್ಲಿ ಆಸ್ಪದವಿಲ್ಲ.

ಎರಡನೆಯ ವರ್ಗದವರು ಊರಲ್ಲೇ ನೆಲೆನಿಂತಿದ್ದು ದೇವಸ್ಥಾನದ ರಾಜಕೀಯಕ್ಕೆ ತಲೆಹಾಕದೆ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಮಹತ್ವ ನೀಡಿ ಶಿಕ್ಷಕರಾಗಿಯೋ, ವೈದ್ಯರಾಗಿಯೋ, ಬ್ಯಾಂಕ್ ಉದ್ಯೋಗಿಗಳಾಗಿಯೋ, ಸರ್ಕಾರಿ ಉದ್ಯೋಗಿಗಳಾಗಿಯೋ ಅಥವಾ ಸ್ವದ್ಯೋಗಿಗಳಾಗಿಯೋ ಜೀವನ ನಿರ್ವಹಣೆಗೆ ದಾರಿ ಕಂಡುಕೊಂಡು ಅದರಲ್ಲಿ ಒಂದು ಹಂತ ತಲುಪಿದವರು. ಅವರ ಮಕ್ಕಳು ಅವರದೇ ಹಾದಿ ಹಿಡಿದು ಇನ್ನೂ ಹೆಚ್ಚಿನ ವಿದ್ಯಾಭ್ಯಾಸ ಮಾಡಿ ಇನ್ನೂ ಉತ್ತಮ ಹುದ್ದೆಗಳನ್ನು ದೇಶವಿದೇಶಗಳಲ್ಲಿ ನಿರ್ವಹಿಸುತ್ತಿರುವವರು.

ಹಳ್ಳಿಗಳಲ್ಲಿದ್ದು ಬೇಸಾಯದಂತಹಾ ಸರಳ ಉದ್ಯೋಗಗಳನ್ನು ಮಾಡಿಕೊಂಡಿದ್ದು ವಂಶಪಾರಂಪರ್ಯವಾಗಿ ನಿರ್ವಹಿಸುತ್ತಾ ಬಂದಿರುವ ದೇವಸ್ಥಾನದ ಕೈಂಕರ್ಯಗಳನ್ನು ಪಾಲಿಗೆ ಬಂದದ್ದು ಪಂಚಾಮೃತವೆಂದು ಭಾವಿಸುತ್ತಾ ಕಷ್ಟನಷ್ಟಗಳೇನಿದ್ದರೂ ತಣ್ಣಗೆ ಅನುಭವಿಸುತ್ತಾ ಇರುವ ವರ್ಗ ಮೂರನೆಯದು.

ಶತಶತಮಾನಗಳಿಂದ ಕುಟುಂಬದ ದೇವಸ್ಥಾನಗಳನ್ನು ನಿರ್ವಹಿಸುತ್ತಿರುವವರು, ಗ್ರಾಮದೇವಸ್ಥಾನಗಳಲ್ಲಿ ವಂಶಪಾರಂಪರ್ಯವಾದ ಮೊಕ್ತೇಸರರ ಹಕ್ಕು ನಿರ್ವಹಿಸುತ್ತಿರುವರು, ರೂಢಿಯಲ್ಲಿರುವ ದೇವಸ್ಥಾನಕ್ಕೆ ಸಂಬಂಧಪಟ್ಟ ಸಂಪ್ರದಾಯಗಳನ್ನು ಅನುಸರಿಸುವವರು (ದೇವರಿಗೆ ಪೂಜೆ ಮಾಡುವ ಮೊದಲು ಅರ್ಚಕರಿಗೆ ಪೂಜೆಯಾಗಲಿ ಎಂದು ಹೇಳುವ ಹಕ್ಕು, ಜಾಗದ ಪ್ರಸಾದ ಎಂದು ಸ್ವೀಕರಿಸುವ ಹಕ್ಕು, ಬ್ರಹ್ಮಕಲಶೋತ್ಸವಕ್ಕೆ ದೇವಸ್ಥಾನದ ಮುಗುಳಿಯನ್ನು ಅಳವಡಿಸುವ ಹಕ್ಕು, ಮೊದಲ ಕಟ್ಟೆಪೂಜೆಯ ಹಕ್ಕು ಇತ್ಯಾದಿಯಾಗಿ ಅವರು ಆ ದೇವಸ್ಥಾನದ ಅಧಿಕಾರಿಗಳಾಗಿದ್ದರೆಂದು ಸೂಚಿಸುವ ಕೆಲವು ಸಂಪ್ರದಾಯಗಳು) ಹಾಗೂ ಅರ್ಚಕರು, ಪುರೋಹಿತರು ಇತ್ಯಾದಿ ವೈದಿಕ ವೃತ್ತಿಯಲ್ಲಿರುವವರು ನಾಲ್ಕನೆಯವರು

ನಮ್ಮ ಸಮಾಜದಲ್ಲಿ ಮೂರನೆಯ ಹಾಗೂ ನಾಲ್ಕನೆಯ ವರ್ಗದವರು ಮತಭೇದದ ಝಳವನ್ನು ಅತ್ಯಂತ ಹೆಚ್ಚು ಅನುಭವಿಸುತ್ತಿರುವವರಾಗಿದ್ದಾರೆ. ಹೀಗೆ ನಾಲ್ಕು ಸ್ತರಗಳಲ್ಲಿ ವಿಂಗಡಣೆಯಾಗಿರುವ ನಮ್ಮ ಸಮಾಜದ ಮನೋಭಾವನೆ ಒಂದೇ ರೀತಿ ಇರಲು ಹೇಗೆ ಸಾಧ್ಯ? ಹಾಗಾದರೆ ಎಲ್ಲರಿಗೂ ಸಮ್ಮತವಾಗುವ ಉತ್ತರ ಹೇಗಿರಬೇಕು?

(ಮುಂದುವರಿಯುವುದು)

ವಿ.ಸೂ.: ಈ ವಿಷಯ ಮೇಲೆ ಓದುಗರ ಅಭಿಪ್ರಾಯಗಳಿಗೆ ಸ್ವಾಗತವಿದೆ

**ಸಂಪಾದಕ ಮಂಡಳಿ**

ಡಾ। ವೈ. ಸುದರ್ಶನ ರಾವ್, ಕುಕ್ಕಿಕಟ್ಟೆ
ಶ್ರೀ ವೈ. ಮೋಹನ ರಾವ್, ಬ್ರಹ್ಮಗಿರಿ
ಶ್ರೀ ಹೆಚ್.ಎನ್.ಶ್ಯಾನುಭಾಗ್, ಅಂಬಲ್ಪಾಡಿ
ಶ್ರೀ ಟಿ. ಸುರೇಶ್ ರಾವ್, ನಿಟ್ಟೂರು
ಶ್ರೀ ವೈ. ಪ್ರಕಾಶ್ ಕುಮಾರ್, ಕುಕ್ಕಿಕಟ್ಟೆ

ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನ ಹಾಗೂ ವೈಯಕ್ತಿಕ ಜಾಹೀರಾತುಗಳಲ್ಲಿ ಅಭಿವ್ಯಕ್ತವಾಗುವ ಅಭಿಪ್ರಾಯಗಳು, ಅನಿಸಿಕೆಗಳು ಲೇಖಕರ ಹಾಗೂ ಜಾಹೀರಾತುದಾರರ ಸ್ವಂತ ಅಭಿಪ್ರಾಯಗಳೇ ಹೊರತು ಅವು ಪತ್ರಿಕೆಯ ಸಂಪಾದಕರ ಅಥವಾ ಪ್ರಕಾಶಕರ ಅಭಿಪ್ರಾಯವಾಗಿರಬೇಕಾಗಿಲ್ಲ. ಲೇಖನಗಳನ್ನು, ಸುದ್ದಿಗಳನ್ನು ಮತ್ತು ಜಾಹೀರಾತುಗಳನ್ನು ಪತ್ರಿಕೆಯ ಮೂಲ ಚಿಂತನೆಗೆ ಅನುಗುಣವಾಗಿ ಸೂಕ್ತ ಮಾರ್ಪಾಡು ಮಾಡಿಕೊಳ್ಳುವ ಅಧಿಕಾರ ಸಂಪಾದಕ ಮಂಡಳಿಗಿದೆ.
-ಸಂಪಾದಕ ಮಂಡಳಿ

**ಪತ್ರಿಕೆಯ ಓದುಗರಿಗೆ ನವರಾತ್ರಿ ಹಾಗೂ ವಿಜಯದಶಮಿ ಹಬ್ಬದ ಶುಭಾಶಯಗಳು**

ಸ್ಥಾನಿಕ ಬ್ರಾಹ್ಮಣರ ದೇವಸ್ಥಾನಗಳ ಪರಿಚಯ ಮಾಲೆ-13

## ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನ ಕುಚ್ಚೂರು, ಕಬ್ಬಿನಾಲೆ, ಕಾರ್ಕಳ ತಾಲೂಕು



ಕಬ್ಬಿನಾಲೆಯೆಂಬ ಮಲೆನಾಡಿನ ಸೆರಗಿನಲ್ಲಿರುವ ಕಾನನದಲ್ಲಿ ನಮ್ಮವರಿಗೂ ಕೂಡಾ ಅಪರಿಚಿತವಾಗಿರುವ ಪ್ರಾಚೀನ ದೇವಸ್ಥಾನವಿದು. ಕಬ್ಬಿನಾಲೆಯ ಸುತ್ತಮುತ್ತಲಿರುವ ವರಾಂಗ, ಮುನಿಯಾಲು, ಹೆಬ್ರಿ, ಅಜೆಕಾರು ಗ್ರಾಮಗಳಲ್ಲಿ ಒಂದು ಕಾಲದಲ್ಲಿ ಎರಡುಸಾವಿರ ಮುಡಿ ಅಕ್ಕಿ ಗೇಣಿ ಬರುವಷ್ಟು ಆಸ್ತಿಯಿದ್ದ ಕುಚ್ಚೂರು ಹೆಬ್ಬಾರ್ ಕುಟುಂಬಕ್ಕೆ ಸೇರಿದ ಈ ದೇವಸ್ಥಾನಕ್ಕೆ ಕನಿಷ್ಟ ಮುನ್ನೂರು ವರ್ಷಗಳ ಇತಿಹಾಸವಿದೆ.

ಮಹಾಕಾಳಿ, ಮಹಾಲಕ್ಷ್ಮಿ ಹಾಗೂ ಮಹಾಸರಸ್ವತಿಯ ಮೂರು ಮೂರ್ತಿಗಳನ್ನು ಒಂದೇ ಪೀಠದಲ್ಲಿಟ್ಟು ದುರ್ಗಾಪರಮೇಶ್ವರಿ ಎಂಬ ಹೆಸರಿನಲ್ಲಿ ಪೂಜಿಸಲ್ಪಡುತ್ತಿರುವ ದೇವಿ ಇಲ್ಲಿನ ಪ್ರಧಾನ ದೇವರು. ಈ ಮೂರೂ ಅಪರೂಪದ ಚೆನ್ನದ ಮೂರ್ತಿಗಳಾಗಿವೆ. ನರಸಿಂಹ ಸಾಲಿಗ್ರಾಮ, ಬಲಮುರಿ ಗಣಪತಿ ಹಾಗೂ ಅನ್ನಪೂರ್ಣೆಗೂ ಇಲ್ಲಿ ಪೂಜೆ ಸಲ್ಲುತ್ತದೆ , ಹಾಗೆಯೇ ಸ್ಥಳದ ದೈವಗಳ ಸಾನ್ನಿಧ್ಯವೂ ಇಲ್ಲಿದೆ. 2003ನೇ ಇಸವಿಯಲ್ಲಿ ಜೀರ್ಣೋದ್ಧಾರ ಮಾಡಿ ಗುಡಿಯೊಂದಿಗೆ ಸುಮಾರು ಐನೂರು ಜನ ಕುಳಿತುಕೊಳ್ಳಬಹುದಾದ ಹಾಲ್ ಹಾಗೂ ಪಾಕಶಾಲೆಯನ್ನು ಕಟ್ಟಲಾಗಿದೆ.

ನಿತ್ಯಪೂಜೆಯೊಂದಿಗೆ ಗಣೇಶ ಚೌತಿ, ಹಾಗೂ ನವರಾತ್ರಿ ಹಬ್ಬಗಳನ್ನು ವಿಜೃಂಭಣೆಯಿಂದ ಇಲ್ಲಿ ಆಚರಿಸಲಾಗುತ್ತದೆ. ಎರಡು ವರ್ಷಗಳಿಗೊಮ್ಮೆ ದೈವಗಳಿಗೆ ಕೋಲ ನೆರವೇರುತ್ತದೆ. ಹಾಗೆಯೇ ಎರಡು ವರ್ಷಗಳಿಗೊಮ್ಮೆ ಇಲ್ಲಿಯ ಮರಾಠಿ ಮೂಲಜನಾಂಗದವರು ಬೂಂದು ಸೇವೆಯೆಂಬ ಜಾನಪದ ಪೂಜೆಯನ್ನು ನೆರವೇರಿಸುತ್ತಾರೆ.

ಹೆಬ್ರಿಯಿಂದ ಕಬ್ಬಿನಾಲೆಗೆ ನೇರವಾದ ರಸ್ತೆಯಿದೆ. ಈ ರಸ್ತೆ ಕೊನೆಯಾಗುವುದೇ ಈ ದೇವಸ್ಥಾನದ ಬಳಿಯಲ್ಲಿ. ಹೆಬ್ರಿಯಿಂದ ಸುಮಾರು 14 ಕಿ.ಮಿ. ದೂರದಲ್ಲಿದೆ. ಹೆಬ್ಬಾರ್ ಕುಟುಂಬದ ಶ್ರೀ ಚಂದ್ರಶೇಖರ ಹೆಬ್ಬಾರ್ ದೇವರ ಪೂಜಾಕಾರ್ಯವನ್ನು ನೆರವೇರಿಸಿಕೊಂಡು ದೇವಳದ ಉಸ್ತುವಾರಿಯನ್ನು ಸಹಾ ನೋಡಿಕೊಳ್ಳುತ್ತಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ಶ್ರೀ ಗಣೇಶ ಹೆಬ್ಬಾರ್, ಚಾರ್ಟೆಡ್ ಅಕೌಂಟೆಂಟ್ ಉಡುಪಿ ಇವರನ್ನು 9845992859ನಲ್ಲಿ ಸಂಪರ್ಕಿಸಬಹುದು

*Power Cut !!!???*
*Install Best Quality Inverters...*
Mobile : 9483242111
K.Suresh Rao : 9036443884
Tel : 0820-2523436



**DEEPA ENTERPRISES**
Business Complex, Ground Floor,
Near Telephone Exchange, Hotel Udupi Residency Road,
Udupi-576101.
Inverters, UPS, Batteries, Repairs Maintenance & Charging

**ಶ್ರೀ ಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ (ನಿ.)**
ಎಲ್.ನಂ.31017, ಭೂವರಾಹ ಕಾಂಪ್ಲೆಕ್ಸ್ , ವಾದಿರಾಜ ರಸ್ತೆ, ಉಡುಪಿ - 576 101. ಫೋನ್ : 2522408

ನಿಮ್ಮ ಕನಸಿನ ಮನೆ ಸಾಕಾರಗೊಳಿಸಿ
“ಗೃಹ ಸಾಲ”
(ಸಂಘದ ಪ್ರಾಥಮಿಕ ಸದಸ್ಯರಿಗೆ 11.50%)

| | | |
|---|---|---|
| ವಾಹನ ಸಾಲ | : | 13% |
| ಹಳೆಯ ವಾಹನ | : | 15% |
| ಆಭರಣ ಸಾಲ | : | 13% |
| ವೈಯಕ್ತಿಕ ಸಾಲ | : | 16% |
| ಶಿಕ್ಷಣ ಸಾಲ | : | 13% |
| ಅಡಮಾನ ಸಾಲ | : | 13% |

**ಠೇವಣಿಗಳ ಬಡ್ಡಿದರ**

| | | | |
|---|---|---|---|
| ಉಳಿತಾಯ ಖಾತೆ | : 5% | ನಿತ್ಯನಿಧಿ ಠೇವಣಿ | : 5% |
| 46 ದಿನಗಳಿಂದ 181 ದಿನಗಳು | : 6%, | 182 ದಿನಗಳಿಂದ 364 ದಿನಗಳು | : 7%, |
| 1 ವರ್ಷ ಮತ್ತು 2 ವರ್ಷಕ್ಕಿಂತ ಕಡಿಮೆ | : 9% | 2 ವರ್ಷ ಮತ್ತು ಹೆಚ್ಚಿನ ಅವಧಿಗೆ | : 9.5% |

(ಹಿರಿಯ ನಾಗರಿಕರಿಗೆ/ಸಂಘ ಸಂಸ್ಥೆಗಳಿಗೆ 1 ವರ್ಷಕ್ಕಿಂತ ಹೆಚ್ಚಿನ ಅವಧಿಯ ಠೇವಣಿಗಳಿಗೆ 0.5% ಹೆಚ್ಚಿಗೆ ನೀಡಲಾಗುವುದು)

2008-09 ರಿಂದ 2014-15ನೇ ವರ್ಷದ ವರೆಗಿನ ಲಾಭಾಂಶವನ್ನು ಪಡೆದುಕೊಳ್ಳದಿರುವ ಸದಸ್ಯರು ಸೊಸೈಟಿಯ ವ್ಯವಹಾರದ ಸಮಯದಲ್ಲಿ ಬಂದು ಪಡೆದುಕೊಳ್ಳಬಹುದು. ಅಥವಾ ತಮ್ಮ ಹೆಸರಿನಲ್ಲಿ ಉಳಿತಾಯ ಖಾತೆಯನ್ನು ತೆರೆದಲ್ಲಿ ಪ್ರತಿ ವರ್ಷದ ಲಾಭಾಂಶವನ್ನು ಆ ಖಾತೆಗೆ ಜಮೆ ಮಾಡಲಾಗುವುದು.

ನಿಮ್ಮ ಹತ್ತಿರದ ಶಾಖೆಯನ್ನು ಇಂದೇ ಸಂಪರ್ಕಿಸಿರಿ

ಪ್ರಧಾನ ಕಛೇರಿ (☎ 2522408) ಕುಕ್ಕಿಕಟ್ಟೆ ಶಾಖೆ (☎ 2592133) ಪಡುಬಿದ್ರಿ ಶಾಖೆ (☎ 2556608) ಕೋಟೇಶ್ವರ ಶಾಖೆ (☎ 9341854114)

# ಶ್ರೀಶಾರದಾ ದೇವಸ್ಥಾನ, ಶ್ರೀಶಾರದಾ ಮಂಟಪ, ಶ್ರೀಶಾರದಾ ನಗರ, ಕುಂಜಿಬೆಟ್ಟು, ಉಡುಪಿ-576 102

ಶಾರದಾ ಶಾರದಾಂಭೋಜವದನಾ ವದನಾಂಬುಜೇ । ಸರ್ವದಾಸರ್ವದಾಽಸ್ಮಾಕಂ ಸನ್ನಿಧಿಂ ಸನ್ನಿಧಿಂ ಕ್ರಿಯಾತ್ ॥

## ಶ್ರೀಶಾರದಾ ದೇವಸ್ಥಾನದಲ್ಲಿ ನವರಾತ್ರಿ ವಿಶೇಷ ಪೂಜೆಗಳು

ತಾ.01-10-2016ರಿಂದ 10-10-2016ರ ವರೆಗೆ ನವರಾತ್ರಿಯ ಪ್ರತಿದಿನ ಶ್ರೀದೇವಸ್ಥಾನದಲ್ಲಿ ಮಧ್ಯಾಹ್ನ 12-30ಕ್ಕೆ ಹಾಗೂ ರಾತ್ರಿ 7-30ಕ್ಕೆ ವಿಶೇಷ ಪೂಜೆ ನಡೆಯಲಿರುವುದು. ಭಕ್ತಾದಿಗಳು ಪ್ರತಿದಿನ ಪೂಜಾ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ಪ್ರಸಾದ ಸ್ವೀಕರಿಸಿ ಕೃತಾರ್ಥರಾಗಬೇಕಾಗಿ ವಿನಂತಿ.

- ಆಡಳಿತ ಮಂಡಳಿ


# ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ, (ರಿ.)

ಶ್ರೀ ಶಾರದಾ ಮಂಟಪ, ಶ್ರೀಶಾರದಾನಗರ, ಕುಂಜಿಬೆಟ್ಟು, ಉಡುಪಿ - 576 102

## ನವರಾತ್ರಿ ಉತ್ಸವದ ಪ್ರಯುಕ್ತ ನಡೆಯಲಿರುವ ಸಾಂಸ್ಕೃತಿಕ ಸ್ಪರ್ಧೆಗಳು

ತಾ.11-10-2016ನೇ ಮಂಗಳವಾರ ಪೂರ್ವಾಹ್ನ ಗಂಟೆ 9.00 ರಿಂದ ನಮ್ಮ ಸಮಾಜ ಬಾಂಧವರಿಗಾಗಿ ಈ ಕೆಳಗಿನ ಸ್ಪರ್ಧೆಗಳು ನಡೆಯಲಿವೆ.

| ಸ್ಪರ್ಧೆಗಳು | ವಿಭಾಗಗಳು | | | ಅವಧಿ |
|---|---|---|---|---|
| **ಭಕ್ತಿಗೀತೆ** ವಿದ್ಯಾರ್ಥಿಗಳಿಗೆ | 4ನೇ ತರಗತಿಯವರೆಗೆ | 5-7ನೇ ತರಗತಿಯವರೆಗೆ | 8ನೇ ತರಗತಿಯಿಂದ ಪದವಿಪೂರ್ವ ತರಗತಿಯವರೆಗೆ | 4 ನಿಮಿಷ |
| | (ಯಾವುದೇ ರೀತಿಯ ಸಂಗೀತ ಉಪಕರಣ ಉಪಯೋಗಿಸಬಾರದು.) | | | |
| **ಚಿತ್ರರಚನೆ** ವಿದ್ಯಾರ್ಥಿಗಳಿಗೆ | 4ನೇ ತರಗತಿಯವರೆಗೆ (ಪ್ರಕೃತಿಯ ಚಿತ್ರ-Scenery) | 5-7ನೇ ತರಗತಿಯವರೆಗೆ (ಹಕ್ಕಿ ಪ್ರಪಂಚ) | 8ನೇ ತರಗತಿಯಿಂದ ಪದವಿಪೂರ್ವ ತರಗತಿಯವರೆಗೆ (ಹಬ್ಬ ಅಥವಾ ಜಾತ್ರೆ) | 60 ನಿಮಿಷ |
| **ರಂಗವಲ್ಲಿ** ವಿದ್ಯಾರ್ಥಿಗಳಿಗೆ | 4ನೇ ತರಗತಿಯವರೆಗೆ | 5-7ನೇ ತರಗತಿಯವರೆಗೆ | 8ನೇ ತರಗತಿಯಿಂದ ಮೇಲ್ಪಟ್ಟು ಎಲ್ಲರಿಗೂ | 60 ನಿಮಿಷ |
| | (3×3 ಅಡಿ ಸ್ಥಳಾವಕಾಶದಲ್ಲಿ ಚುಕ್ಕೆ ಹಾಕಿ ರಂಗವಲ್ಲಿ-ಯಾವುದೇ ಪರಿಕರಣಗಳನ್ನು ಉಪಯೋಗಿಸಬಾರದು) | | | |
| **ಶಂಖ ಊದುವುದು** (ಮುಕ್ತ ಅವಕಾಶ) | ಶಂಖಗಳನ್ನು ಸ್ಪರ್ಧಿಗಳೇ ತರಬೇಕು | | | |
| **ಕನಕಾಧಾರ ಸ್ತೋತ್ರ** | 50 ವರ್ಷ ಮೇಲ್ಪಟ್ಟ ಮಹಿಳೆಯರಿಗೆ | | | |
| **ಚೂರ್ಣಿಕೆ** | ಎಲ್ಲಾ ವಯೋಮಾನದವರಿಗೆ | | | |

ವಿಶೇಷ ಸೂಚನೆಗಳು :

1) ಆಸಕ್ತ ಸ್ಪರ್ಧಾಳುಗಳು ಅದೇ ದಿನ ಬೆಳಿಗ್ಗೆ 8.30ಕ್ಕೆ ಹಾಜರಿದ್ದು ತಮ್ಮ ಹೆಸರನ್ನು ನೋಂದಾಯಿಸಿ ಕೊಳ್ಳಬೇಕು, ಕಡ್ಡಾಯವಾಗಿ ಬೆಳಿಗ್ಗೆ 9-30ಕ್ಕೆ ಸ್ಪರ್ಧೆಗಳು ಪ್ರಾರಂಭವಾಗಲಿವೆ
2) ರಂಗವಲ್ಲಿಗೆ ಬಣ್ಣದ ಹುಡಿ ಮತ್ತು ಚಿತ್ರ ರಚನೆಗೆ ಕಾಗದ ಹಾಳೆಗಳನ್ನು ಒದಗಿಸಲಾಗುವುದು. ಬೇಕಾದ ಇತರ ಪರಿಕರಗಳನ್ನು ಸ್ಪರ್ಧಾಳುಗಳೇ ತರಬೇಕು.
3) ಹೆಚ್ಚಿನ ನಿಯಮಗಳನ್ನು ಸ್ಪರ್ಧೆ ಆರಂಭವಾಗುವ ಮೊದಲು ಸ್ಪರ್ಧಾಳುಗಳಿಗೆ ತಿಳಿಸಲಾಗುವುದು.
4) ಕನಿಷ್ಠ 3 ಜನ ಸ್ಪರ್ಧಿಗಳು ಇಲ್ಲದಿದ್ದಲ್ಲಿ ಸ್ಪರ್ಧೆ ನಡೆಸುವ ಅಥವಾ ಬಿಡುವ ನಿರ್ಧಾರ ವ್ಯವಸ್ಥಾಪಕರದ್ದು.
5) ಫಲಿತಾಂಶ ನಿರ್ಣಯದಲ್ಲಿ ನಿರ್ಣಾಯಕರ ತೀರ್ಮಾನವೇ ಅಂತಿಮ.

11-30ರಿಂದ ಸಭಾಕಾರ್ಯಕ್ರಮ, ಪ್ರತಿಭಾ ಪುರಸ್ಕಾರ ಮತ್ತು ವಿದ್ಯಾರ್ಥಿವೇತನ ವಿತರಣೆ ನಡೆಯಲಿರುವುದು.

ಶ್ರೀಶಾರದಾ ಹವ್ಯಾಸಿ ಯಕ್ಷ ಕಲಾವಿದರು, ಕುಂಜಿಬೆಟ್ಟು, ಉಡುಪಿ ಇವರಿಂದ ಯಕ್ಷಗಾನ ''ಧ್ರುವ ಚರಿತ್ರೆ-ಧರ್ಮಾಂಗದ ದಿಗ್ವಿಜಯ-ಕೃಷ್ಣಾರ್ಜುನ ಕಾಳಗ''

**ಸಮಯ: ಸಂಜೆ 5-30ರಿಂದ 9-00ರ ವರೆಗೆ**

-ಅಧ್ಯಕ್ಷರು, ಕಲೆ ಮತ್ತು ಸಾಂಸ್ಕೃತಿಕ ವೇದಿಕೆ

## ಶ್ರೀ ಶಂಕರ ಪ್ರತಿಷ್ಠಾನ ಕಾರ್ಕಳ (ರಿ.) ವಾರ್ಷಿಕ ಮಹಾಸಭೆ

■...1ನೇ ಪುಟದಿಂದ

ಶಾರದಾ ಮಂಟಪ, ಮತ್ತು ಶ್ರೀಮತಿ ಸರೋಜಿನಿ, ಕಾಂತಾವರ, ನಿವೃತ್ತ ರಾಷ್ಟ್ರಪ್ರಶಸ್ತಿ ವಿಜೇತ ಶಿಕ್ಷಕಿ ಅತಿಥಿಗಳಾಗಿ ಆಗಮಿಸಿದ್ದರು. ಪ್ರತಿಷ್ಠಾನದ ಅಧ್ಯಕ್ಷರಾದ ಶ್ರೀ ಮುರಳೀಧರ ಶರ್ಮ, ಕಾರ್ಯದರ್ಶಿ ಶ್ರೀ ರತ್ನಾಕರ ರಾವ್ ಕೆ., ಕೋಶಾಧಿಕಾರಿ ಶ್ರೀ ರಾಜಶೇಖರ ರಾವ್ ಹಾಗೂ ಶ್ರೀಮತಿ ಪ್ರಭಾವತಿ ಐ.ಕೆ., ಮಹಿಳಾ ವಿಭಾಗ ಅಧ್ಯಕ್ಷೆ ಶ್ರೀಮತಿ ಶೈಲಜಾ ರತ್ನಾಕರ, ಉಪಾಧ್ಯಕ್ಷೆ ಶ್ರೀಮತಿ ಮಲ್ಲಿಕಾ ಎಸ್. ಹೆಬ್ಬಾರ್, ಶ್ರೀಮತಿ ಪದ್ಮನಿ ಎ.ಕೆಮ್ಮಣ್ಣು, ಕಾರ್ಯದರ್ಶಿ ಇವರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಅತಿಥಿಗಳನ್ನು ಹಾಗೂ ಸಭಾಸದಸ್ಯರನ್ನು ಶ್ರೀಮತಿ ಶೈಲಜಾ ರತ್ನಾಕರ್‌ರವರು ಸ್ವಾಗತಿಸಿದರು. ಪ್ರತಿಷ್ಠಾನದ ವಾರ್ಷಿಕ ವರದಿಯನ್ನು ಶ್ರೀ ರತ್ನಾಕರ ರಾಯರು ವಾಚಿಸಿ ಸದಸ್ಯರ ಮಂಜೂರಾತಿ ಪಡೆದರು. ವಾರ್ಷಿಕ ಆಯವ್ಯಯ ಪಟ್ಟಿಯನ್ನು ಶ್ರೀ ರಾಜಶೇಖರ ರಾಯರು ಓದಿ ಮಂಜೂರಾತಿ ಪಡೆದರು.

ಪಿಯುಸಿ ಹಾಗೂ ಎಸ್‌ಎಸ್‌ಎಲ್‌ಸಿಯಲ್ಲಿ ಉತ್ತಮ ಅಂಕಗಳನ್ನು ಪಡೆದ ಪ್ರತಿಭಾಸಂಪನ್ನ ವಿದ್ಯಾರ್ಥಿಗಳನ್ನು ಶ್ರೀಮತಿ ಪ್ರಭಾವತಿ ಐ.ಕೆ.ರವರು ಓದಿ ಹೇಳಿದಂತೆ, ಸನ್ಮಾನಿಸಲಾಯಿತು.

ಸಮಾಜದ ಹಿರಿಯರನ್ನು ಹಾಗೂ ವಿವಿಧ ಕ್ಷೇತ್ರಗಳಲ್ಲಿ ಸಾಧಕರನ್ನು ಸನ್ಮಾನಿಸುವ ಕಾರ್ಯಕ್ರಮದಲ್ಲಿ ಶಾಲು ಹೊದಿಸಿ, ಹಾರ ಹಾಕಿ, ಸ್ಮರಣಿಕೆಗಳನ್ನು ನೀಡುವುದರ ಮೂಲಕ ಅವರನ್ನು ಸತ್ಕರಿಸಲಾಯಿತು.

1) ಕಬ್ಬಿನಾಲೆಯ ಶ್ರೀಮತಿ ರತ್ನಮ್ಮನವರು ಶಾಲೆಯ ವಿದ್ಯಾಭ್ಯಾಸ ಅಲಭ್ಯವಾದರೂ ಸ್ವಪರಿಶ್ರಮದಿಂದ ವಿದ್ಯೆ ಪಡೆದು ವಿವಿಧ ಸಾಮಾಜಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಸಮಾಜದಲ್ಲಿ ಪ್ರತಿಷ್ಠಿತ ಸ್ಥಾನಮಾನ ಪಡೆದವರು. ಇವರ ಪರಿಚಯ ಮಾಡಿದವರು ಶ್ರೀಮತಿ ಲತಾ ಶರ್ಮ.

2) ನಂದಳಿಕೆ ಶ್ರೀ ಶಂಕರರಾಯರು, ನಿವೃತ್ತ ಅಧ್ಯಾಪಕರು. ಇವರ ಪರಿಚಯವನ್ನು ಕೆಮ್ಮಣ್ಣು ಅನಿಲ್‌ರಾವ್‌ರವರು ಮಾಡಿದರು.

3) ಇನ್ನೋರ್ವ ಅಧ್ಯಾಪಕರು ನಂದಳಿಕೆ ಶ್ರೀ ವೆಂಕಟಕೃಷ್ಣರಾಯರು (ವಿ.ಕೆ.ರಾವ್). ಮುಖ್ಯ ಅಧ್ಯಾಪಕರಾಗಿ ಸಾಮಾಜಿಕ ಚಟುವಟಿಕೆಗಳಲ್ಲಿ ಮುಂಚೂಣಿಯಲ್ಲಿ ನಿಂತು ಪ್ರಶಸ್ತಿಗಳನ್ನು ಪಡೆದವರು. ಇವರ ಪರಿಚಯವನ್ನು ಶ್ರೀ ಟಿ.ಕೆ. ಕೃತಿವಾಸ ಶರ್ಮರು ಮಾಡಿದರು.

4) ಕಾರ್ಕಳದ ಭುವನೇಂದ್ರ ಕಾಲೇಜಿನಲ್ಲಿ ಕಚೇರಿಯ ಮುಖ್ಯ ಸಹಾಯಕರಾಗಿ ನಿವೃತ್ತಿ ಪಡೆದು ನಿವೃತ್ತಿಯ ಮೊದಲು ಹಾಗೂ ನಂತರ ವಿವಿಧ ಸಂಘಟನೆಗಳಲ್ಲಿ ಪದಾಧಿಕಾರಿಗಳಾಗಿ ಇಂದು ಶ್ರೀ ಅನಂತಶಯನ ದೇವಳದ ಆಡಳಿತ ಮೊಕ್ತೇಸರರ ಸ್ಥಾನವನ್ನು ನಿರ್ವಹಿಸುತ್ತಿರುವ ಕೊಕ್ರಾಡಿ ಶ್ರೀ ರತ್ನಾಕರ ರಾಯರು. ಇವರನ್ನು ಶ್ರೀ ಜೋಗಲ್ಬೆಟ್ಟು ಭವಾನಿಶಂಕರ ರಾಯರು ಪರಿಚಯ ಮಾಡಿದರು.

5) ಅಂತರಾಷ್ಟ್ರೀಯ ಕ್ರೀಡಾ ಸ್ಪರ್ಧೆಗಳಲ್ಲಿ ಪದಕಗಳನ್ನು ಪಡೆದ ಹಿರಿಯ ಕ್ರೀಡಾಪಟು ಶ್ರೀ ಕುಮಾರ ಸ್ವಾಮಿಯವರು. ಇವರ ಪರಿಚಯವನ್ನು ಮಾಡಿದವರು ಕರ್ವಾಲು ಸತೀಶ್ ರಾಯರು.

ಸನ್ಮಾನಕ್ಕೆ ಉತ್ತರಿಸಿದ ಶ್ರೀ ವಿ.ಕೆ.ರಾವ್‌ರವರು ಸನ್ಮಾನವು ಪ್ರೋತ್ಸಾಹವನ್ನು ನೀಡುವುದಲ್ಲದೆ ಮುಂದಿನ ಜನಾಂಗಕ್ಕೆ ಉತ್ತಮ ಕೆಲಸ ನಿರ್ವಹಿಸಲು ಪ್ರೇರೇಪಿಸುವುದೆಂದರು.

ಪ್ರತಿಷ್ಠಾನದ ಸದಸ್ಯರಿಗಾಗಿ ಏರ್ಪಡಿಸಿದ್ದ ಬೇರೆ ಬೇರೆ ಸ್ತರಗಳಲ್ಲಿ ಜರಗಿದ ಸ್ಪರ್ಧೆಗಳ ವಿಜೇತರಿಗೆ ಬಹುಮಾನಗಳನ್ನು ವಿತರಿಸಲಾಯಿತು. ಮಹಾ ಸಭೆಯ ದಿನದ ಉಪಹಾರ ಹಾಗೂ ಭೋಜನದ ಪ್ರಾಯೋಜಕರಾದ ಪ್ರೊ। ಶ್ರೀ ಕೆ.ಸೂರ್ಯ ನಾರಾಯಣ ರಾವ್ ದಂಪತಿಗಳಿಗೆ ಹಾಗೂ ಅವರ ಪುತ್ರರಾದ ಶ್ರೀ ಡಾ। ಶರತ್ ಕುಮಾರ ದಂಪತಿಗಳನ್ನು ಸನ್ಮಾನಿಸಲಾಯಿತು.

ಅಭ್ಯಾಗತರಾದ ಶ್ರೀ ಭುವನೇಂದ್ರ ರಾಯರು ತಮ್ಮ ಸಂದೇಶದಲ್ಲಿ ಸ್ಥಾನಿಕ ಸಮಾಜದ ಹಿಂದಿನ ಹಾಗೂ ಇಂದಿನ ಸ್ಥಾನಮಾನಗಳ ತುಲನಾತ್ಮಕ ವಿಚಾರಗಳನ್ನು ಪ್ರಸ್ತಾಪಿಸಿದರು. ಮುಂದಿನ ಪೀಳಿಗೆಯ ಯುವಕರು ಹಾಗೂ ಮಕ್ಕಳು ಅಭಿವೃದ್ಧಿ ಪಥದಲ್ಲಿ ಸಾಗಲು ಸಂಘ ಸಂಸ್ಥೆಗಳು ನೆರವಾಗಬೇಕೆಂದು ಮಾರ್ಗದರ್ಶನ ವಿತ್ತರು. ಇವರನ್ನು ನಕ್ರೆ ಶಿವರಾಯರು ಸಭೆಗೆ ಪರಿಚಯಿಸಿದರು.

ಇನ್ನೋರ್ವ ಅಭ್ಯಾಗತರಾದ ಶ್ರೀಮತಿ ಸರೋಜಿನಿ ಕಾಂತಾವರ ಮಕ್ಕಳಿಗೆ ಧಾರ್ಮಿಕ ಭಾವನೆಗಳ ಹಾಗೂ ವಿಚಾರಗಳ ನಿಕಟ ಪರಿಚಯವಾಗಬೇಕೆಂದರು. ಧರ್ಮವು ಸಮಾಜದ ಧಾರಣಾಶಕ್ತಿಯನ್ನು ಹೆಚ್ಚಿಸಿ ವ್ಯಕ್ತಿಗಳಲ್ಲಿ ಉತ್ತಮ ಕೆಲಸಗಳ ನಿರ್ವಹಣೆಗೆ ಶಕ್ತಿ ತುಂಬುವುದೆಂದೂ, ಸಂಘಸಂಸ್ಥೆಗಳು ಈ ಮಾರ್ಗದಲ್ಲಿ ಕೆಲಸ ಮಾಡುವ ಅವಶ್ಯಕತೆಯನ್ನು ಒತ್ತಿ ಹೇಳಿದರು.

ಪ್ರತಿಷ್ಠಾನದ ಅಧ್ಯಕ್ಷರು ಕಾರ್ಯಕ್ರಮದ ಯಶಸ್ಸಿಗೆ ಕಾರಣರಾದವರನ್ನು ವಂದಿಸಿದರು. ವರ್ಷದ ಎಲ್ಲಾ ಕಾರ್ಯಗಳಲ್ಲಿ ಉತ್ತಮವಾಗಿ ಸ್ಪಂದಿಸಿದಂತೆ ಮುಂದೆಯೂ ಸಹಕಾರ ನೀಡಬೇಕೆಂದರು. ಕಿರಿಯರಿಗೆ ಪ್ರತಿಷ್ಠಾನದ ಕಾರ್ಯಕ್ರಮಗಳಲ್ಲಿ ಹೆಚ್ಚು ಆಸಕ್ತಿ ವಹಿಸಲು ಮಾರ್ಗದರ್ಶನವನ್ನು ಹಿರಿಯರು ಮಾಡಬೇಕೆಂದು ಕರೆ ಇತ್ತರು.


ಶ್ರೀಮತಿ ಮಲ್ಲಿಕಾ ಹೆಬ್ಬಾರರು ಧನ್ಯವಾದವಿತ್ತರು. ಕರ್ವಾಲು ಶ್ರೀ ಹರಿಶ್ಚಂದ್ರ ರಾಯರು ಕಾರ್ಯಕ್ರಮವನ್ನು ನಿರ್ವಹಿಸಿದ್ದರು. ಅನಂತರ ಪ್ರತಿಷ್ಠಾನದ ಮಹಿಳಾ ಸದಸ್ಯರಿಂದ ಎರಡು ನೃತ್ಯಗಳು ಹಾಗೂ ಒಂದು ಪ್ರಹಸನಗಳೊಂದಿಗೆ ಕಾರ್ಯಕ್ರಮಗಳು ಸಂಪನ್ನಗೊಂಡವು.

-ಕೆ. ಮುರಲೀಧರ ಶರ್ಮ




# ಬ್ರಹ್ಮಾತ್ಮೈಕತ್ವಜ್ಞಾನಾನುಭವ

- ವೈ. ಮೋಹನ ರಾವ್




ಕೃತಿ : 'ಬ್ರಹ್ಮಾತ್ಮೈಕತ್ವಜ್ಞಾನಾನುಭವ', ಲೇಖಕರು : ಎಶಾರಾ ಪ್ರಕಾಶಕನ : **ಶ್ರೀ ಎಲ್ಲೂರು ಲಕ್ಷ್ಮೀನಾರಾಯಣ ರಾವ್ ಜ್ಯೋತಿಷ್ಕ ಮೆಮೋರಿಯಲ್ ಚಾರಿಟೇಬಲ್ ಟ್ರಸ್ಟ್ (ರಿ.), ಕುಕ್ಕಿಕಟ್ಟೆ, ಉಡುಪಿ.** ಎಲ್ಲವೂ ಗೌರವ ಪ್ರತಿಗಳು, ಮಾರಾಟಕ್ಕಿಲ್ಲ.

ಎಲ್ಲೂರು ಶಾಂತಿನಾಥ ರಾವ್ (ಎಶಾರಾ) ಇವರು ತಾ.06-06-1946ರಂದು ಎಲ್ಲೂರು ಗ್ರಾಮದಲ್ಲಿ ಶ್ರೀ ಎಲ್ಲೂರು ಲಕ್ಷ್ಮೀನಾರಾಯಣ ರಾವ್ ಮತ್ತು ಶ್ರೀಮತಿ ಗಿರಿಜಮ್ಮ ದಂಪತಿಗಳ ಎಂಟನೆಯ ಪುತ್ರರಾಗಿ ಜನಿಸಿದರು. ಪಾಥಮಿಕ ಶಿಕ್ಷಣವನ್ನು ಎಲ್ಲೂರಿನ ಕಸಬಾ ಶಾಲೆಯಲ್ಲಿ ಪಡೆದರು. ಪ್ರೌಢಶಿಕ್ಷಣವನ್ನು ಅದಮಾರು ಹೈಸ್ಕೂಲಿನಲ್ಲಿಯೂ ಮತ್ತು ಪಿಯುಸಿಯನ್ನು ಉಡುಪಿಯ ಎಮ್‌ಜಿಎಮ್ ಕಾಲೇಜಿನಲ್ಲಿ ಪಡೆದರು. ಮೈಸೂರಿನ ಎನ್‌ಐಇ ಇಂಜಿನಿಯರಿಂಗ್ ಕಾಲೇಜಿನಲ್ಲಿ ಮೆಕ್ಯಾನಿಕಲ್ ವಿಷಯದಲ್ಲಿ ಪದವಿ ಪಡೆದರು. ಅನಂತರ ಮಲಪ್ರಭಾ ನೀರಾವರಿ ಯೋಜನೆ, ದಾಂಡೇಲಿಯ ಜಲ ವಿದ್ಯುತ್ ಯೋಜನೆ ಮತ್ತು ರಾಯಚೂರಿನ ಕೃಷ್ಣ ವಿದ್ಯುತ್ ಸ್ಥಾವರಗಳಲ್ಲಿ ಇಂಜಿನಿಯರ್‌ರಾಗಿ ಸೇವೆ ಸಲ್ಲಿಸಿದರು. 2003ನೇ ಇಸವಿಯಲ್ಲಿ ಸೇವೆಯಿಂದ ನಿವೃತ್ತರಾದರು. ಸುಮಾರು ಮೂವತ್ತು ವರ್ಷಗಳಿಂದ ಉಪನಿಷತ್ತಿನ ಸಾರವಾದ ಬ್ರಹ್ಮಾತ್ಮೈಕತ್ವಜ್ಞಾನಾನುಭವವನ್ನು ಶಾಂಕರ ಭಾಷ್ಯಾನುಸಾರವಾಗಿ ಅಧ್ಯಯನ ಮಾಡಿರುತ್ತಾರೆ. 'ಮಾನವಜನ್ಮ ದೊಡ್ಡದು' ಇದು ಇವರ ಪ್ರಥಮ ಪ್ರಕಟಿತ ಕೃತಿ. 'ಬ್ರಹ್ಮಾತ್ಮೈಕತ್ವಜ್ಞಾನಾನುಭವ' ಇದು ಇವರ ಎರಡನೇಯ ಪ್ರಕಟವಾಗುತ್ತಿರುವ ಕೃತಿ. ಇವರು ಶ್ರೀ ಎಲ್ಲೂರು ಲಕ್ಷ್ಮೀನಾರಾಯಣ ರಾವ್ ಜ್ಯೋತಿಷ್ಕ ಮೆಮೋರಿಯಲ್ ಚ್ಯಾರಿಟೇಬಲ್ ಟ್ರಸ್ಟಿನ ಟ್ರಸ್ಟಿಗಳಾಗಿರುತ್ತಾರೆ.

''ನಿಜವಾಗಿ ಆತ್ಮವು ಬೇರೆ, ನಮ್ಮ ದೇಹ ಮನಸ್ಸು ಬುದ್ಧಿ ಇಂದ್ರಿಯಗಳು ಬೇರೆ! ಆತ್ಮವು ನಮ್ಮ ದೇಹೇಂದ್ರಿಯ ಮನಸ್ಸುಗಳನ್ನು ಮುನ್ನಡೆಸುತ್ತಿರುವ ಶಕ್ತಿಯಾಗಿದೆ. ಈ ಪೂರ್ತಿ ಸೃಷ್ಟಿಯನ್ನು, ಈ ಜಗತ್ತೆಲ್ಲವನ್ನು ಇದೇ ಶಕ್ತಿಯು ಮುನ್ನಡೆಸುತ್ತಿದೆ, ಎಂದು ಉಪನಿಷತ್ತುಗಳು ಹೇಳುತ್ತವೆ. ಈ ಮಾತು ನಮ್ಮೆಲ್ಲರ ಅನುಭವಕ್ಕೆ ಬಂದಿರುವ ಸತ್ಯವೂ ಹೌದು. ನಾವು, ನಮ್ಮೊಳಗಿರುವ ಆತ್ಮವನ್ನು, ಸಿಗಿದು ನೋಡಿದರೂ ಕಾಣಲಾರೆವು. ಆದರೆ ನಿಧಾನವಾಗಿ ಶಾಂತ ಮನಸ್ಸಿನಿಂದ ಕುಳಿತು ಯೋಚಿಸಿ, ವಿಶ್ಲೇಷಿಸಿ ಆತ್ಮನ ಇರವನ್ನು ಅನುಭವಿಸಬಲ್ಲೆವು. ನಮ್ಮೊಳಗಿನ ಆತ್ಮನನ್ನು ಸ್ವತಃ ಗುರುತಿಸಿಕೊಳ್ಳುವ ಪ್ರಕ್ರಿಯೆ ಸುಲಭದ್ದಲ್ಲ'' ಎಂದು ಚ್ಯಾರಿಟೇಬಲ್ ಟ್ರಸ್ಟ್‌ನ ಸಂಚಾಲಕರೂ ಹಾಗೂ ಪ್ರಕಾಶಕರೂ ಆದ ಡಾ| ವೈ. ಸುದರ್ಶನ ರಾವ್ ಇವರು 'ಪ್ರಕಾಶಕರ ಮಾತು' ಎಂಬಲ್ಲಿ ಕೃತಿಯ ಕುರಿತು ಹೇಳಿರುತ್ತಾರೆ.

''ಅತ್ಯಂತ ಸೂಕ್ಷ್ಮವಾದ, ಆಕಾಶ ಅವ್ಯಕ್ತಗಳಿಗಿಂತಲೂ ಸೂಕ್ಷ್ಮವಾದ, ಇಂದ್ರಿಯಗಳಿಂದ ತಿಳಿಯಲಾಗದ, ಮನಸ್ಸಿನಿಂದ ಕಲ್ಪಿಸಿಕೊಳ್ಳಲೂ ಸಾಧ್ಯವಿಲ್ಲದ, ಯಾವುವೇ ತರತಮಗಳಿಲ್ಲದೆ ಹೆಚ್ಚು ಕಡಿಮೆಗಳಿಲ್ಲದೆ ಯಾವಾಗಲೂ ಸಮವಾಗಿರುವ, ಬೇರಿನ್ನೊಂದೆಂಬುದಿಲ್ಲದೆ ತನಗೆರಡನೆಯದೆಂಬುದಿಲ್ಲದೆ ಒಂದೇ ಆಗಿರುವ, ಅತ್ಯಂತ ಶುದ್ಧವಾದ, ಪವಿತ್ರವಾದ ಒಂದು ಸದ್ವಸ್ತುವು ಎಲ್ಲ ಕಡೆಗಳಲ್ಲಿಯೂ ಎಲ್ಲೆಲ್ಲೂ ಅಖಂಡವಾಗಿ, ಅಪರಿಚ್ಛಿನ್ನವಾಗಿ, ಅನಂತವಾಗಿ, ಅವ್ಯಕ್ತವಾಗಿ ವ್ಯಾಪಿಸಿಕೊಂಡಿದೆ, ಪಸರಿಸಿಕೊಂಡಿದೆ, ಹರಡಿಕೊಂಡಿದೆ. ಇದು ಎಂದೂ ಹೇಗೂ ಯಾವ ಸ್ಥಿತ್ಯಂತರಗಳನ್ನೂ ಹೊಂದದೆ, ಯಾವ ಪರಿಣಾಮಗಳನ್ನೂ ಹೊಂದದೆ, ಯಾವಾಗಲೂ ಒಂದೇ ತೆರನಾಗಿ, ನಿರಂತರವಾಗಿ, ನಿಶ್ಚಲವಾಗಿ, ಶಾಶ್ವತವಾಗಿ, ಸತ್ಯವಾಗಿ ಇದೆ. ಇದು ಜ್ಞಾನಸ್ವರೂಪವಾಗಿದೆ. ಸ್ವಯಂ ಜ್ಯೋತಿಯಾಗಿದೆ, ಪ್ರಕಾಶಿಸುತ್ತಿದೆ, ಬೆಳಗುತ್ತಿದೆ. ಇದು ಅತ್ಯಂತ ನಿರ್ಭಯವಾಗಿದೆ. ಇದು ಪರಮಾನಂದ ಸ್ವರೂಪವಾಗಿದೆ'' (ಪುಟ 3) ಎಂದು ಲೇಖಕರಾದ ಎಶಾರಾ ಇವರು ಕೃತಿಯಲ್ಲಿ ತಿಳಿಸಿದ್ದಾರೆ.

''ಯಾರು ಆ ಪರಮವಾದ ಬ್ರಹ್ಮವನ್ನು ತಿಳಿಯುತ್ತಾನೆಯೋ ಅವನು ಬ್ರಹ್ಮವೇ ಆಗಿದ್ದಾನೆ ಎಂಬುದು ಉಪನಿಷತ್ತಿನ ತಿಳಿವಿನ ಉಪದೇಶ. ಆದುದರಿಂದ, ಸಗುಣ ಭಕ್ತಿಯು ಸುಲಭ ಸಾಧನ, ಜ್ಞಾನವು ನೇರಾದ ಸಾಧನ. ಹೇಗಾದರೂ, ಜ್ಞಾನದಿಂದಲೇ ಮೋಕ್ಷ. ದೇಹಾದಿಗಳಲ್ಲದ ಆತ್ಮನಾದ ನಾನು ಏಕಮೇವಾದ್ವಿತೀಯ ಬ್ರಹ್ಮವೇ ಎಂಬ ಅದ್ವೈತ ಬ್ರಹ್ಮಾತ್ಮೈಕತ್ವಜ್ಞಾನದಿಂದಲೇ ಮೋಕ್ಷ. ಬೇರೆ ರೀತಿಯಿಂದ ಮೋಕ್ಷವಾಗುವುದಿಲ್ಲ'' (ಪುಟ 65) ಎಂದು ಲೇಖಕರು ಈ ಕೃತಿಯಲ್ಲಿ ತಿಳಿಸುತ್ತಾರೆ.

''ಆದರೆ ಆತ್ಮಜ್ಞಾನವೆಂಬುದು ಹೀಗಲ್ಲ. ದೇಹಾದಿಗಳಲ್ಲದ ಆತ್ಮನಾದ ನಾನು ಬ್ರಹ್ಮವೇ ಎಂಬ ಜ್ಞಾನದಿಂದೊಡಗೂಡಿಯೇ ಆತ್ಮನಲ್ಲಿ ಒಂದಾಗುವುದರಿಂದ, ಮತ್ತು ಇದಕ್ಕೂ ಮೊದಲೇ, ಆಸೆಯ ವಾಸನೆಯೂ ಉಳಿಯದಂತೆ ಎಲ್ಲ ಆಸೆಗಳನ್ನೂ ಬಿಟ್ಟಿರುವುದರಿಂದ, ಒಮ್ಮೆ ಆತ್ಮಜ್ಞಾನವಾಯಿತೆಂದರೆ ಮತ್ತೆ ಹಿಂತಿರುಗುವುದಿಲ್ಲ'' (ಪುಟ 166) ಎಂದು ಲೇಖಕರು ತಿಳಿಸಿದ್ದಾರೆ.

ಎಲ್ಲೂರು ಶಾಂತಿನಾಥ ರಾವ್ ಇವರಿಗೆ ಸತತ ಅಧ್ಯಯನದ ಫಲರೂಪವಾಗಿ 'ಬ್ರಹ್ಮಾತ್ಮೈಕತ್ವ ಜ್ಞಾನಾನುಭವ' ಸಿದ್ಧಿಸಿದೆ. ನಮಗೆ ಇದು ಸಿದ್ಧಿಸಬೇಕಾದರೆ ಅವರಂತೆ ನಾವು ಈ ಪುಸ್ತಕದ ಅಧ್ಯಯನ ಮಾಡಬೇಕಾಗುತ್ತದೆ.

# ಭಾಗವತ ರಸಪ್ರಶ್ನೆಗಳು

- ಡಾ| ವಿ.ಪಿ.ಸತ್ಯನಾರಾಯಣ




ಪುಸ್ತಕದ ಹೆಸರು : **ಭಾಗವತ ರಸಪ್ರಶ್ನೆಗಳು**
ಲೇಖಕರು : **ಡಾ| ಎಚ್.ವಿ.ನರಸಿಂಹಮೂರ್ತಿ**
ಪುಟಗಳು : **160**
ಬೆಲೆ : **ರೂ.100/-**
ಪ್ರಕಾಶನ : **ವಿಕಾಸ ಪ್ರಕಾಶನ, ಚೇತನ, ನೇರಂಬಳ್ಳಿ ರಸ್ತೆ, ಕೋಟೇಶ್ವರ ಅಂಚೆ-576222, ಕುಂದಾಪುರ ತಾಲೂಕು, ಉಡುಪಿ ಜಿಲ್ಲೆ.**
ದೂರವಾಣಿ : **08254-261145**

ಪುರಾಣಗಳು ಭಾರತೀಯ ಇತಿಹಾಸದ ಅಮೂಲ್ಯನಿಧಿಗಳು; ಸನಾತನ ಹಿಂದೂ ಧರ್ಮದ ಆಧಾರ ಸ್ತಂಭಗಳು. ಚತುರ್ದಶ ವಿದ್ಯಾಸ್ಥಾನಗಳಲ್ಲಿ ಒಂದಾಗಿರುವ ಪುರಾಣಗಳ ಪರಿಚಯವಿಲ್ಲದೆ ನಮ್ಮ ಶಿಕ್ಷಣ ಪೂರ್ಣಗೊಳ್ಳದು. ಇವು ಬಹಳ ಪುರಾತನವಾದ ಆಖ್ಯಾನಗಳಾದರೂ ಇಂದಿಗೂ ನವೀನವಾಗಿ ಕಂಡು ಬರುತ್ತಿದ್ದು, ಓದುಗರ ಮೇಲೆ ಅಚ್ಚಳಿಯದ ಪ್ರಭಾವ ಬೀರುವ ಸಾಮರ್ಥ್ಯವನ್ನು ಹೊಂದಿದೆ. ಧ್ರುವ, ಪ್ರಹ್ಲಾದ, ಹರಿಶ್ಚಂದ್ರ, ಅಂಬರೀಷ, ಮಾರ್ಕಂಡೇಯ, ಅಹಲ್ಯ, ದ್ರೌಪದಿ, ಸೀತೆ ಮೊದಲಾದ ಅಸಂಖ್ಯ ಆದರ್ಶ ವ್ಯಕ್ತಿಗಳು ಇಂದು ನಮ್ಮ ಹೃನ್ಮನಗಳನ್ನು ತುಂಬಿರುವುದು ಪುರಾಣಗಳಿಂದ. ಪುರಾಣೋಕ್ತವಾದ ವಸ್ತುಗಳನ್ನೊಳಗೊಂಡ ಕತೆ, ಕಾದಂಬರಿ, ನಾಟಕ, ಯಕ್ಷಗಾನ, ನೃತ್ಯರೂಪಕ-ಇವೆಲ್ಲ ಅಂದಿನ ಮಹಾಮಹಿಮರ ಅನುಕರಣೀಯವಾದ ವ್ಯಕ್ತಿತ್ವವನ್ನು ನಮ್ಮ ಮುಂದೆ ತೆರೆದಿರಿಸಿ, 'ರಾಮಾದಿವದ್ವರ್ತಿತವ್ಯಂ; ನ ರಾವಣಾದಿವತ್'- ಎಂದು ಉಪದೇಶಿಸುವ ಸುಹೃತ್ ಸಮ್ಮಿತೆಗಳು ವ್ಯಕ್ತಿತ್ವದ ಸಮಗ್ರ ವಿಕಸನಕ್ಕೆ, ಜೀವನ ಮೌಲ್ಯಗಳ ಸರಿಯಾದ ಅರಿವಿಗೆ ಪುರಾಣಗಳ ಪರಿಚಯ ತೀರಾ ಅಗತ್ಯ.

ಅಷ್ಟಾದಶಪುರಾಣಗಳಲ್ಲಿ ಭಕ್ತಿರಸಪ್ರಧಾನವಾದ ಭಾಗವತ ಪ್ರಧಾನವಾದುದು. ಕೃಷ್ಣನ ಜೀವನ ಚರಿತ್ರೆಯ ಅತ್ಯಂತ ಅಧಿಕೃತ ಗ್ರಂಥವೆಂದು ಇದನ್ನು ಕರೆಯಲಾಗುತ್ತದೆ. ಹನ್ನೆರಡು ಸ್ಕಂದಗಳಿಂದ ಕೂಡಿದ ಈ ಗ್ರಂಥದಲ್ಲಿ 18000 ಶ್ಲೋಕಗಳಿವೆ. 'ವಿದ್ಯಾವತಾಂ ಭಾಗವತೇ ಪರೀಕ್ಷಾ' - ಎಂಬಂತೆ ವಿದ್ವಾಂಸರನ್ನು ಪರೀಕ್ಷೆಗೆ ಒಡ್ಡುವ ಕೃತಿ ಇದು. ಏಕೆಂದರೆ ಇಲ್ಲಿರುವಷ್ಟು ದಾರ್ಶನಿಕ ವಿಚಾರಗಳು ಪ್ರಾಯಶಃ ಮತ್ತಾವ ಪುರಾಣಗಳಲ್ಲೂ ಇಲ್ಲ. ಅನೇಕ ವ್ಯಾಖ್ಯಾನಗಳನ್ನು ಹೊಂದಿರುವ ಈ ಭಾಗವತವು ಜನಪ್ರಿಯ ಪುರಾಣವಾಗಿದೆ.

ವಿಶ್ರಾಂತ ಪ್ರಾಧ್ಯಾಪಕರೂ, ನಾಡಿನ ಪ್ರಸಿದ್ಧ ಲೇಖಕರೂ ಆದ ಡಾ| ಎಚ್.ವಿ.ನರಸಿಂಹಮೂರ್ತಿಯವರು ಭಾಗವತ ಪುರಾಣವನ್ನು ಈ ಪುಸ್ತಕದಲ್ಲಿ ರಸಪ್ರಶ್ನೆಗಳ ಮೂಲಕ ಪ್ರಸ್ತುತ ಪಡಿಸಿದ್ದಾರೆ. ಇದು ಧಾವಂತದ ಯುಗ. ಹಾಗಾಗಿ ಎಲ್ಲರದೂ ಅವಸರದ ದಿನಚರಿ. ಸಮಗ್ರ ಭಾಗವತವನ್ನು ಓದಿ, ಅರ್ಥೈಸಿಕೊಳ್ಳುವಷ್ಟು ತಾಳ್ಮೆ ಯಾರಿಗೂ ಇಲ್ಲ. ಆದರೆ ಇಲ್ಲಿನ ಪ್ರಮುಖ ಸಂಗತಿಗಳನ್ನು ಹೀಗೆ ಚುಟುಕಾದ ಪ್ರಶ್ನೋತ್ತರ ರೂಪದಲ್ಲಿ ಕೊಟ್ಟಾಗ ಅದು ಓದುಗರಿಗೆ ಪ್ರಿಯವಾಗುತ್ತದೆ. ವಿದ್ಯಾರ್ಥಿಗಳಂತೂ ರಸಪ್ರಶ್ನೆ (Quiz) ಪುಸ್ತಕಗಳನ್ನು ತಪ್ಪದೆ ಓದುತ್ತಾರೆ. ಇಂದು ಪ್ರಾಥಮಿಕ ಶಾಲೆಗಳಿಂದ ಮೊದಲ್ಗೊಂಡು ಐ.ಎ.ಎಸ್. ಪರೀಕ್ಷೆಗಳ ವರೆಗೆ ಕೇಳುವುದು ಇಂತಹ ರಸಪ್ರಶ್ನೆಗಳನ್ನು. ಸಮಾಚಾರ ಮತ್ತು ವಿದ್ಯುನ್ಮಾನ ಮಾಧ್ಯಮಗಳಲ್ಲೂ ಇದಕ್ಕೆ ಸ್ಥಾನ ಕಲ್ಪಿಸಲಾಗಿದೆ.

ಧರ್ಮಬಂಧುಗಳಾದ ಡಾ| ಎಚ್.ವಿ.ನರಸಿಂಹಮೂರ್ತಿಯವರು ರಾಮಾಯಣ-ಮಹಾಭಾರತ-ಪುರಾಣ-ಹಿಂದೂಧರ್ಮ-ಭಾರತೀಯ ಸಂಸ್ಕೃತಿ-ಇತ್ಯಾದಿ ಕುರಿತು ಈಗಾಗಲೇ ಈ ಮಾದರಿಯ ಅನೇಕ ರಸಪ್ರಶ್ನೆ (Quiz) ಪುಸ್ತಕಗಳನ್ನು ಪ್ರಕಟಿಸಿ, ಈ ಕ್ಷೇತ್ರಕ್ಕೆ ಮಹತ್ತ್ವದ ಕೊಡುಗೆಯನ್ನು ನೀಡಿದ್ದಾರೆ. ಅತ್ಯಂತ ಮಹತ್ತ್ವದ ಅವರ ಈ ಪುಸ್ತಕವೂ ಎಲ್ಲ ವರ್ಗದ ಓದುಗರನ್ನು ತಲುಪಲಿ; ನಮ್ಮ ಜನರಲ್ಲಿ ಪೌರಾಣಿಕ ಪ್ರಜ್ಞೆ ಮೂಡಲಿ-ಎಂದು ಹಾರೈಸೋಣ.

# ನೀರೆಬೈಲೂರಿನಲ್ಲಿ ಶ್ರೀ ಮ.ನಾ.ಹೆಬ್ಬಾರರ ಹರಿಕಥಾ ಕಾರ್ಯಕ್ರಮ



ಭಾರತ ಸರಕಾರದ ಸಂಸ್ಕೃತಿ ಇಲಾಖೆಯು ವಿದ್ಯಾಭಾರತಿ ಸಂಸ್ಥೆಗೆ ವಹಿಸಿರುವ ಕಾರ್ಯಕ್ರಮದನ್ವಯ ದಿನಾಂಕ 27-08-2016ರಂದು ಕಾರ್ಕಳ ತಾಲೂಕು ನೀರೆಬೈಲೂರಿನ ಸರಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಹರಿದಾಸ ಶ್ರೀ ಮ.ನಾ.ಹೆಬ್ಬಾರ, ಎಂ.ಎ.ಬಿ.ಎಡ್ ಇವರಿಂದ ಅಧ್ಯಾತ್ಮಿಕ, ಧಾರ್ಮಿಕ, ನೈತಿಕ ಶಿಕ್ಷಣನ್ನೊಳಗೊಂಡಂತೆ 'ಭಕ್ತ ಧ್ರುವ', 'ಭಕ್ತ ಚಂದ್ರಹಾಸ', 'ಭಕ್ತ ಪ್ರಹ್ಲಾದ'-ಈ ಕತೆಗಳನ್ನು ಪ್ರಸ್ತುತ ಪಡಿಸಿದ ಹರಿಕಥಾ ಕಾರ್ಯಕ್ರಮವು ಜರಗಿತು. ಪಕ್ಕವಾದ್ಯದಲ್ಲಿ ನಿವೃತ್ತ ಶಿಕ್ಷಕ ಶ್ರೀ ಎ. ಸದಾನಂದ ಅಲ್ಸೆಯವರು ಹಾರ್ಮೋನಿಯಂನಲ್ಲಿಯೂ, ಅಧ್ಯಾಪಕ ಶ್ರೀ ಹರಿಶ್ಚಂದ್ರ ರಾವ್ ಇವರು ತಬಲಾದಲ್ಲಿಯೂ ಸಹಕರಿಸಿದ್ದರು. ಸ್ಥಳೀಯ ನಚಿಕೇತ ವಿದ್ಯಾಲಯದವರು ವ್ಯವಸ್ಥೆ ಮಾಡಿರುವ ಈ ಕಾರ್ಯಕ್ರಮದ ಆರಂಭದಲ್ಲಿ ಮುಖ್ಯೋಪಾಧ್ಯಾಯರು ಸ್ವಾಗತಿಸಿ, ಕೊನೆಯಲ್ಲಿ ಧನ್ಯವಾದವಿತ್ತರು. ಶ್ರೀ ನಿತ್ಯಾನಂದ ಪಡ್ರೆಯವರು ಕಲಾವಿದರುಗಳನ್ನು ಗೌರವಿಸಿದರು. ಸುಮಾರು ಐದುನೂರಕ್ಕೂ ಮಿಕ್ಕಿ ವಿದ್ಯಾರ್ಥಿಗಳು ಭಾಗವಹಿಸಿದ್ದರು

# ಬೊಂಬೆಯಾಟದ ಸಾಕ್ಷ್ಯಚಿತ್ರ



ಶ್ರೀ ಗೋಪಾಲಕೃಷ್ಣ ಯಕ್ಷಗಾನ ಬೊಂಬೆಯಾಟ ಸಂಘ(ರಿ), ಪಿಲಿಕುಂಜೆ ಕಾಸರಗೋಡು ಇದು ಜಗತ್ಪ್ರಸಿದ್ಧವಾದ ಬೊಂಬೆಯಾಟ ಕಲೆಯ ಉಳಿವು ಹಾಗೂ ಬೆಳವಣಿಗೆಗಾಗಿ ಶ್ರಮಿಸುತ್ತಿರುವ ನಮ್ಮ ಸಮಾಜದವರಾದ ಶ್ರೀ ಕೆ.ವಿ.ರಮೇಶ್ ರವರ ಮುಂದಾಳ್ವದಲ್ಲಿ ನಡೆಯುತ್ತಿರುವ ಸಂಸ್ಥೆಯಾಗಿದ್ದು ದೇಶವಿದೇಶಗಳಲ್ಲಿ ಪ್ರದರ್ಶನ ನೀಡಿ ಪ್ರಸಿದ್ಧಿಯನ್ನು ಪಡೆದಿದೆ. ಈ ಸಂಸ್ಥೆಯ ಪ್ರದರ್ಶನವನ್ನು ಮೆಚ್ಚಿ ಕೋಟೆಯಂನ ಕೆ.ಆರ್. ನಾರಾಯಣನ್ ನ್ಯಾಶನಲ್ ಇನ್ಸ್ಟಿಟ್ಯೂಟ್ ಆಫ್ ವಿಶುವಲ್ ಸಯನ್ಸ್ ಆಂಡ್ ಆರ್ಟ್ಸ್ ಕಾಲೇಜಿನ ನಿರ್ದೇಶಕರು ಹಾಗು ವಿದ್ಯಾರ್ಥಿಗಳು ಈ ಕಲೆಯನ್ನು ಚಿತ್ರೀಕರಿಸಿ ದಾಖಲೀಕರಣಗೊಳಿಸುತ್ತಿದ್ದಾರೆ.

ಶ್ರೀ ಧನ್‌ದೀಪ್‌ಕೃಷ್ಣ ಇದನ್ನು ನಿರ್ದೇಶಿಸುತ್ತಿದ್ದು ಅರುಣ್ ಕೆ. ಭಾಸ್ಕರ್ ಛಾಯಾಗ್ರಾಹಕರಾಗಿ ಸಹಕರಿಸುತ್ತಿದ್ದಾರೆ. ಯಕ್ಷಗಾನ ಕಲಾವಿದೆ ಶ್ರೀ ರಕ್ಷಾಳ ಶ್ರೀ ಕೃಷ್ಣನ ಪಾತ್ರ, ಶ್ರೀ ಕೆ. ವಿ ರಮೇಶ್ ರವರ ಸಾಧನೆಯ ಪಥ, ಯಕ್ಷಗಾನದ ದಂತಕಥೆಯಾದ ಪಾರ್ತಿಸುಬ್ಬ (ಶ್ರೀ ಕೆ.ವಿ ರಮೇಶರವರು ಪಾರ್ತಿ ಸುಬ್ಬನ ವಂಶದವರು), ಜಗಜಟ್ಟಿ ಪುಳ್ಳೂರು ಬಾಚ, ಕೂಡ್ಲು ದೊಡ್ಡಸುಬ್ಬಯ್ಯ ಶ್ಯಾನುಭಾಗ, ಅಡೂರು ಸುಬ್ರಾಯ ಭಾಗವತ (ಇವರೆಲ್ಲರೂ ಸ್ಥಾನಿಕ ಬ್ರಾಹ್ಮಣರು) ಬಗೆಗಿನ ಮಾಹಿತಿಗಳೆಲ್ಲಾ ಈ ಸಾಕ್ಷಚಿತ್ರದಲ್ಲಿವೆ ಒಟ್ಟು 45 ನಿಮಿಷಗಳ ಸಾಕ್ಷಚಿತ್ರ ಇದಾಗಲಿದ್ದು ಶ್ರೀ ಗೋಪಾಲಕೃಷ್ಣ ಯಕ್ಷಗಾನ ಬೊಂಬೆಯಾಟ ಸಂಘ (ರಿ)ದ ಬಗ್ಗೆ ನಿರ್ಮಾಣವಾದ ಐದನೇ ಸಾಕ್ಷ್ಯ ಚಿತ್ರವಿದು.

## ಕನ್ಯಾ ಮಾಸದ ವಿಶೇಷ ದಿನಗಳು

| | |
|---|---|
| 16-09-2016 | ಕನ್ಯಾ ಸಂಕ್ರಮಣ, ಹುಣ್ಣಿಮೆ |
| 17-09-2016 | ಪಿತೃಪಕ್ಷಾರಂಭ |
| 19-09-2016 | ಸಂಕಷ್ಟಹರ ಚತುರ್ಥಿ |
| 26-09-2016 | ಸರ್ವೈಕಾದಶಿ |
| 30-09-2016 | ಮಹಾಲಯ ಅಮಾವಾಸ್ಯೆ |
| 01-10-2016 | ಶರನ್ನವರಾತ್ರಿ ಆರಂಭ |
| 08-10-2016 | ಶ್ರೀಶಾರದಾ ಪೂಜಾರಂಭ |
| 10-10-2016 | ಮಹಾನವಮಿ, ಆಯುಧ ಪೂಜಾ |
| 11-10-2016 | ವಿಜಯದಶಮಿ, ಶಾರದಾ ವಿಸರ್ಜನೆ, ಚಂಡಿಕಾಹೋಮ |
| 12-10-2016 | ಸರ್ವೈಕಾದಶಿ |
| 16-10-2016 | ಹುಣ್ಣಿಮೆ |
| 17-10-2016 | ತುಲಾ ಸಂಕ್ರಮಣ, ಕಾವೇರಿ ತೀರ್ಥೋದ್ಭವ |

## ಶ್ರೀಶಾರದಾ ದೇವಸ್ಥಾನ, ಶಾರದಾನಗರ, ಕುಂಜಿಬೆಟ್ಟು , ಉಡುಪಿ

**ಈ ತಿಂಗಳ ಕಾರ್ಯಕ್ರಮಗಳು**

(ದರ್ಶನದ ಸಮಯ ಬೆಳಿಗ್ಗೆ 8-00ರಿಂದ 12-00, ಸಂಜೆ 3-30ರಿಂದ 8-00)

ಮಂಗಳಾರತಿ : ಪ್ರತಿ ದಿನ ಬೆಳಿಗ್ಗೆ 8-00, ಮಧ್ಯಾಹ್ನ 12-00 ಹಾಗೂ ರಾತ್ರಿ 7-30ಕ್ಕೆ

ಪ್ರತಿ ಮಂಗಳವಾರ: ಸೌಂದರ್ಯಲಹರಿ ಪಾರಾಯಣ ಸಂಜೆ 5ರಿಂದ } ಮಹಿಳಾ

ಪ್ರತಿ ಶುಕ್ರವಾರ : ಲಲಿತಾ ಸಹಸ್ರನಾಮ ಮತ್ತು ದೇವರ ಭಜನೆ ಸಂಜೆ 5ರಿಂದ } ವೇದಿಕೆಯಿಂದ

ಪ್ರತಿ ಆದಿತ್ಯವಾರ : ಸ್ವಾಧ್ಯಾಯ ಸಮಿತಿಯವರಿಂದ "ಪಾರಾಯಣ" ಸಂಜೆ ಗಂಟೆ 4-30ರಿಂದ

**ತಾ.19-09-2016 ಸಂಕಷ್ಟಹರ ಚತುರ್ಥಿಯಂದು "ಸಾಮೂಹಿಕ ಗಣಹೋಮ" ಬೆಳಿಗ್ಗೆ ಗಂಟೆ 10-00ರಿಂದ (ಸೇವಾ ಶುಲ್ಕ ರೂ.51/-)**

ತಾ.07-10-2016 ಮೂಲಾ ನಕ್ಷತ್ರದ ದಿನದಂದು ಶ್ರೀದೇವಿಗೆ ಸಹಸ್ರನಾಮಾರ್ಚನೆ (ಸಮಯ ಸಂಜೆ 5-00ರಿಂದ 6-00ರ ವರೆಗೆ)

ತಾ.21-09-2016 ಮತ್ತು ತಾ.06-10-2016 ಪಂಚಮಿಯಂದು "ನಾಗದೇವರಿಗೆ ತನುಸೇವೆ" ಬೆಳಿಗ್ಗೆ 9-00ರಿಂದ ಮಧ್ಯಾಹ್ನ 12-00 ಗಂಟೆಯ ತನಕ

**ಭಕ್ತಾದಿಗಳೆಲ್ಲರಿಗೂ ಆದರದ ಸ್ವಾಗತ**

## ದಿ| ಕೆಡೆಂಜ ಭಾಗೀರಥಿ ದಾಮೋದರ ಶಾಸ್ತ್ರಿ ಪ್ರತಿಷ್ಠಾನ ಕುಳಾಯಿ

**ಕೋಂ ಕೆ. ಸದಾಶಿವ ಶಾಸ್ತ್ರಿ, 3-68(7), ಶ್ರೀ ವಿಷ್ಣುಮೂರ್ತಿ ದೇವಸ್ಥಾನ ರಸ್ತೆ, ಕುಳಾಯಿ-575019.**

2015-2016ನೇ ಸಾಲಿನ ಶೈಕ್ಷಣಿಕ ವರ್ಷದ ಎಸ್.ಎಸ್.ಎಲ್.ಸಿ. ಹಾಗೂ ದ್ವಿತೀಯ ಪಿ.ಯು.ಸಿ. ಪರೀಕ್ಷೆಯಲ್ಲಿ 85%ಕ್ಕೂ ಹೆಚ್ಚು (ವಿಶಿಷ್ಟ ಶ್ರೇಣಿ) ಅಂಕ ಗಳಿಸಿ ತೇರ್ಗಡೆಯಾದ ವಿದ್ಯಾರ್ಥಿ/ವಿದ್ಯಾರ್ಥಿನಿಯರನ್ನು ದಿನಾಂಕ 16-10-2016 ಭಾನುವಾರ ಶ್ರೀ ಸುಬ್ರಹ್ಮಣ್ಯ ಸಭಾ, ಬಿಜೈ ರಸ್ತೆ, ಕರಂಗಲ್ಪಾಡಿ, ಮಂಗಳೂರು ಇಲ್ಲಿ ದಸರಾ ಪ್ರಯುಕ್ತ ನಡೆಯುವ ನಾಡಹಬ್ಬದಂದು ಮೇಲೆ ತಿಳಿಸಿದ ಪ್ರತಿಷ್ಠಾನದ ವತಿಯಿಂದ ಪುರಸ್ಕರಿಸಲಾಗುವುದು. ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಯ ಅರ್ಹ ಆಸಕ್ತ ವಿದ್ಯಾರ್ಥಿ/ವಿದ್ಯಾರ್ಥಿನಿಯರು ತಮ್ಮ ಅಂಕಪಟ್ಟಿಯ ಯಥಾನಕಲು, ವಿಳಾಸ, ದೂರವಾಣಿ ಸಂಖ್ಯೆ, ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ ಇತ್ಯಾದಿಗಳನ್ನು **ದಿನಾಂಕ 30-09-2016**ರ ಒಳಗೆ ಮೇಲ್ಕಾಣಿಸಿದ ವಿಳಾಸಕ್ಕೆ ತಲುಪಿಸಲು ಕೋರಲಾಗಿದೆ. - ಕೆ. ಸದಾಶಿವ ಶಾಸ್ತ್ರಿ

## ವಿದ್ಯಾರ್ಥಿ ವೇತನಕ್ಕೆ ಅರ್ಜಿ ಆಹ್ವಾನ

**ಉಡುಪಿ ಕುಕ್ಕಿಕಟ್ಟೆಯ ಶ್ರೀ ಎಲ್ಲೂರು ಲಕ್ಷ್ಮೀನಾರಾಯಣ ರಾವ್ ಜ್ಯೋತಿಷ್ಯ ಮೆಮೋರಿಯಲ್ ಚಾರಿಟೇಬಲ್ ಟ್ರಸ್ಟ್ (ರಿ.)** ವತಿಯಿಂದ 2016-17ನೇ ಸಾಲಿನ **ದಿ| ಡಾ.ವೈ.ಚಂದ್ರಶೇಖರರಾವ್ ಸ್ಮಾರಕ** ವಿದ್ಯಾರ್ಥಿವೇತನಕ್ಕಾಗಿ ಪ್ರತಿಭಾನ್ವಿತ ಹಾಗೂ ಆರ್ಥಿಕ ಸಹಾಯ ಅಗತ್ಯವಿರುವ ತಾಂತ್ರಿಕ ಹಾಗೂ ವೈದ್ಯಕೀಯ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ತರಗತಿಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳಿಗಾಗಿ **ದಿ| ಸಾತ್ವಿಕ್ ಶಾಸ್ತ್ರಿ ಸ್ಮಾರಕ** ವಿದ್ಯಾರ್ಥಿವೇತನಕ್ಕಾಗಿಯೂ ಅರ್ಜಿ ಆಹ್ವಾನಿಸಲಾಗಿದೆ. ಅರ್ಹ ವಿದ್ಯಾರ್ಥಿಗಳು ಕೈಬರಹದ ಅರ್ಜಿಯಲ್ಲಿ ತಮ್ಮ ವಿವರಗಳೊಂದಿಗೆ ಆದಾಯ ಹಾಗೂ ವ್ಯಾಸಂಗ ದೃಢಪತ್ರಿಕೆಗಳನ್ನು ಲಗತ್ತಿಸಿರಬೇಕು. ತಂದೆ-ತಾಯಿಯರ ವೃತ್ತಿ, ವಿಳಾಸ, ದೂರವಾಣಿ ಸಂಖ್ಯೆ ಹಾಗೂ ನಿಮ್ಮ ಬ್ಯಾಂಕ್ ಖಾತೆಯ ವಿವರಗಳನ್ನು (ಪಾಸ್ ಬುಕ್ಕಿನ ಮೊದಲ ಹಾಳೆಯ ಪ್ರತಿ) ಅರ್ಜಿಯಲ್ಲಿ ನಮೂದಿಸಿರಬೇಕು. ಕ್ರಮಬದ್ಧವಾಗಿ ಬರೆದ ಅರ್ಜಿಗಳನ್ನು ಮಾತ್ರ ಗಮನಿಸಲಾಗುವುದು. ಅರ್ಜಿ ಕಳುಹಿಸಲು ಕೊನೆಯ **ದಿನಾಂಕ 31-10-2016**. ಅರ್ಜಿಯನ್ನು ಈ ಕೆಳಗಿನ ವಿಳಾಸಕ್ಕೆ ಕಳುಹಿಸಬೇಕಾಗಿ ವಿನಂತಿ.

**ಡಾ| ವೈ.ಸುದರ್ಶನರಾವ್,**

ಕೆನರಾಹೆಲ್ತ್‌ಸೆಂಟರ್, ಅಂಜುಮಾನ್ ರಸ್ತೆ, ಸಿಟಿಬಸ್ಟ್ಯಾಂಡ್ ಬಳಿ, ಉಡುಪಿ-576101

## ಶ್ರೀಶಾರದಾ ವೇದಿಕೆ - ಪ್ರಕಟಣೆ

ಪತ್ರಿಕೆಯ ವಿಳಾಸ : ಸಂಪಾದಕರು, ಶ್ರೀ ಶಾರದ ಪತ್ರಿಕೆ, ಶಾರದಾ ಮಂಟಪ, ಶಾರದಾ ನಗರ, ಕುಂಜಿಬೆಟ್ಟು, ಉಡುಪಿ-576 102.
ಇ-ಮೇಯ್ಲ್ : srisharadaudupi@gmail.com
ವೆಬ್‌ಸೈಟ್ : www.srisharada.org ವಾಟ್ಸ್ ಆ್ಯಪ್ ನಂಬ್ರ : 9845136322
ಶಾರದ ಮಂಟಪದ ಮ್ಯಾನೇಜರ್ : 0820-2520754, 9448108920

### ಶ್ರೀಶಾರದಾ ವೇದಿಕೆಗೆ ಸದಸ್ಯತನ ಶುಲ್ಕ

ಆಜೀವ ಸದಸ್ಯರು : ರೂ.500/-, ದಾನಿಗಳು : ರೂ.1000/-,
ಪೋಷಕರು : ರೂ.5000/-, ಮಹಾಪೋಷಕರು : ರೂ.10000/-

### ಜಾಹೀರಾತುದರ

| | | |
|---|---|---|
| ಕಲರ್ ಪುಟದ 1/3ನೇ ಭಾಗ 12 ತಿಂಗಳುಗಳಿಗೆ | : | ರೂ.12000/- |
| ಕಲರ್ ಪುಟದ 1/8ನೇ ಭಾಗ ಶುಭಾಶಯ ಇತ್ಯಾದಿ ಜಾಹೀರಾತು ಒಂದುಬಾರಿಗೆ | : | ರೂ.1000/- |
| ಕಪ್ಪು ಬಿಳುಪು ಪುಟದ 1/8ನೇ ಭಾಗ ಶುಭಾಶಯ ಇತ್ಯಾದಿ ಜಾಹೀರಾತು ಒಂದು ಬಾರಿಗೆ | : | ರೂ.500/- |
| ಕಪ್ಪು ಬಿಳುಪು ಪುಟದ 2 ಇಂಚು 2 ಕಾಲಂ 12 ತಿಂಗಳುಗಳಿಗೆ | : | ರೂ.1500/- |

ಈ ಶುಲ್ಕವನ್ನು ತಮ್ಮ ಹೆಸರು ವಿಳಾಸದೊಂದಿಗೆ, ನಗದು, ಚೆಕ್ ಅಥವಾ ಡಿ.ಡಿ. ಮುಖಾಂತರ ಸಲ್ಲಿಸಬಹುದು ಅಥವಾ ಕರ್ನಾಟಕ ಬ್ಯಾಂಕ್, ಕುಂಜಿಬೆಟ್ಟು ಬ್ರಾಂಚ್, ಬ್ಯಾಂಕಿನ ಖಾತೆಗೆ ನೇರವಾಗಿ ಜಮಾ ಮಾಡಿ ಅದರ ರಶೀದಿಯನ್ನು ಮೇಲಿನ ನಮ್ಮ ಇ-ಮೇಯ್ಲ್/ವಾಟ್ಸ್‌ಆ್ಯಪ್ ವಿಳಾಸಕ್ಕೆ ಕಳುಹಿಸಬಹುದು. ಖಾತೆಯ ಹೆಸರು ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ, ಕುಂಜಿಬೆಟ್ಟು, ಉಡುಪಿ, ಖಾತೆಸಂಖ್ಯೆ : 8032500102881601 at Karnataka Bank, Kunjibettu Branch, Udupi IFSC Code KARB0000803

**ಸಮಾಜ ಬಾಂಧವರು ಪತ್ರಿಕೆಯನ್ನು ತುಂಬು ಹೃದಯದಿಂದ ಪ್ರೋತ್ಸಾಹಿಸುವಂತೆ ವಿನಂತಿ**

## ಶ್ರೀಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ.

ವಿದ್ಯಾರ್ಥಿ ವೇತನ ವೇದಿಕೆ

### ವಿದ್ಯಾರ್ಥಿವೇತನಕ್ಕೆ ಅರ್ಜಿ ಆಹ್ವಾನ 2016-17

ಪದವಿಪೂರ್ವ, ಪದವಿ, ಸ್ನಾತಕೋತ್ತರ, ಡಿ.ಎಡ್., ಬಿ.ಎಡ್., ಡಿಪ್ಲೋಮಾ, ಇಂಜಿನಿಯರಿಂಗ್, ವೈದ್ಯಕೀಯ, ವೇದ ತರಗತಿಗಳಲ್ಲಿ ಕಲಿಯುತ್ತಿರುವ, ಹೆತ್ತವರ ವಾರ್ಷಿಕ ಆದಾಯವು ರೂ.3,00,000ಕ್ಕೆ ಮೀರದ ವಿದ್ಯಾರ್ಥಿಗಳಿಂದ ವಿದ್ಯಾರ್ಥಿವೇತನಕ್ಕೆ ಅರ್ಜಿಯನ್ನು ಆಹ್ವಾನಿಸಲಾಗಿದೆ. ಹಿಂದಿನ ತರಗತಿಯ ಅಂಕಪಟ್ಟಿಯ ಪ್ರತಿ, ಪ್ರಸ್ತುತ ವರ್ಷದ ಶಾಲೆಯಿಂದ ವ್ಯಾಸಂಗ ಪ್ರಮಾಣ ಪತ್ರ, ಮತ್ತು ಬ್ಯಾಂಕಿನ ಪಾಸ್ ಪುಸ್ತಕದ ಮೊದಲನೇ ಪುಟದ ಪ್ರತಿಗಳ ದಾಖಲೆ ಸಹಿತ ಶ್ರೀಶಾರದಾ ಮಂಟಪದಲ್ಲಿ ಲಭ್ಯವಿರುವ ನಿಗದಿತ ಅರ್ಜಿ ಫಾರಂನಲ್ಲಿ **ತಾ.24-09-2016**ರ ಒಳಗೆ ಸಂಘದ ಕಛೇರಿಗೆ ಅರ್ಜಿಯನ್ನು ಕಳುಹಿಸಿ ಕೊಡಬೇಕು.

- ಅಧ್ಯಕ್ಷರು, ವಿದ್ಯಾರ್ಥಿವೇತನ, ಶಿಕ್ಷಣ ಮತ್ತು ತರಬೇತಿ ವೇದಿಕೆ,

## ಶ್ರೀಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ.

### ಡಾ| ದಯಾನಂದ ಎಸ್. ರಾವ್ ಟ್ರಸ್ಟ್-ಸಾಲ ವಿದ್ಯಾರ್ಥಿ ವೇತನಕ್ಕೆ ಅರ್ಜಿ ಆಹ್ವಾನ : 2016-17

ಡಾ| ದಯಾನಂದ ಎಸ್. ರಾವ್ ಎಜ್ಯುಕೇಶನ್ ಟ್ರಸ್ಟ್, ಬೆಂಗಳೂರು, ಇವರು "ರತ್ನಾಬಾಯಿ ಸ್ಮಾರಕ ಸಾಲ ವಿದ್ಯಾರ್ಥಿವೇತನ"ಕ್ಕಾಗಿ ಉಡುಪಿ ಕುಂಜಿಬೆಟ್ಟಿನ ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.)ಕ್ಕೆ ಸಾಲ ವಿದ್ಯಾರ್ಥಿವೇತನ ನೀಡಲು ನಗದು ಹಣವನ್ನು ಒದಗಿಸಿದ್ದಾರೆ. ಈ ಮೊಬಲಗನ್ನು ಟ್ರಸ್ಟ್‌ನ ನಿಬಂಧನೆಯಂತೆ ಕಲಿಕೆ ಸಮಯದಲ್ಲಿ ಬಡ್ಡಿ ರಹಿತ ಸಾಲ ರೂಪದಲ್ಲಿ ವಿದ್ಯಾರ್ಥಿಗಳಿಗೆ ನೀಡಲಾಗುವುದು. **2016-2017**ನೇ ಶೈಕ್ಷಣಿಕ ಸಾಲಿನಲ್ಲಿ ವೃತ್ತಿಪರ ತರಗತಿಗಳಿಗೆ ಸೇರಿದ ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಇಂಜಿನಿಯರಿಂಗ್, ಮೆಡಿಕಲ್, ಇತ್ಯಾದಿ ತರಗತಿಗಳ ವಿದ್ಯಾರ್ಥಿಗಳಿಗೆ ಈ ಸಾಲ ವಿದ್ಯಾರ್ಥಿವೇತನವನ್ನು ನೀಡಲಾಗುವುದು. **ಅವರ ಅಗತ್ಯತೆ, ಆರ್ಥಿಕ ಸ್ಥಿತಿಗತಿ ಮತ್ತು ಪ್ರತಿಭೆಯನ್ನಾಧರಿಸಿ ಸಾಲ ಮಂಜೂರು ಮಾಡಲಾಗುವುದು.** ಸಾಲ ವಿದ್ಯಾರ್ಥಿ ವೇತನವನ್ನು ವಿದ್ಯಾರ್ಥಿಯ ಮುಂದಿನ ವರ್ಷಗಳ ಪ್ರಗತಿಯನ್ನು ಪರಿಶೀಲಿಸಿ ಪೂರ್ಣ ಅಧ್ಯಯನ ಅವಧಿಯಲ್ಲಿ ಮುಂದುವರಿಸಲಾಗುವುದು.

ಸಾಲ ವಿದ್ಯಾರ್ಥಿವೇತನವನ್ನು ಪಡೆಯಲು ಆಸಕ್ತಿಯುಳ್ಳ ವಿದ್ಯಾರ್ಥಿಗಳು ನಿಗದಿತ **ಅರ್ಜಿ ಫಾರಂ**ನ್ನು ಶಾರದಾ ಮಂಟಪ ಅಥವಾ ಶ್ರೀಶಾರದಾ ಕ್ರೆಡಿಟ್ ಕೋ-ಅಪರೇಟಿವ್ ಸೊಸೈಟಿಯಲ್ಲಿ ಪಡೆದು ಫಾರಂ ಭರ್ತಿ ಮಾಡಿ, ಪರೀಕ್ಷೆಯ ಅಂಕಪಟ್ಟಿ ಹಾಗೂ ವ್ಯಾಸಂಗ ಪ್ರಮಾಣ ಪತ್ರ ಮತ್ತಿತರ ದಾಖಲೆಗಳೊಂದಿಗೆ ಈ ಕೆಳಗಿನ ವಿಳಾಸಕ್ಕೆ **ತಾ.24-09-2016**ರ ಒಳಗೆ ತಲಪುವಂತೆ ಕಳುಹಿಸಬೇಕು.

**ವಿ.ಸೂ. : ಕಳೆದ ಸಾಲಿನಲ್ಲಿ ಸಾಲ ವಿದ್ಯಾರ್ಥಿ ವೇತನ ಪಡೆದುಕೊಂಡ ಅಭ್ಯರ್ಥಿಗಳು ನವೀಕರಣಕ್ಕಾಗಿ ಕಳೆದ ಸಾಲಿನ ತಮ್ಮ ವ್ಯಾಸಂಗದ ಪ್ರಗತಿಯ ವಿವರ ಹಾಗೂ ಪ್ರಸಕ್ತ ಸಾಲಿನ ವ್ಯಾಸಂಗ ಪ್ರಮಾಣ ಪತ್ರದ ಜೊತೆಗೆ ಅರ್ಜಿ ಸಲ್ಲಿಸಬೇಕು. ವ್ಯಾಸಂಗ ಪೂರೈಸಿದ ವಿದ್ಯಾರ್ಥಿಗಳು ಮರುಪಾವತಿಸುವ ಬಗ್ಗೆ ಶ್ರೀ ಶಾರದಾ ಮಂಟಪ (ಫೋನ್ : 0820-2520754) ಅಥವಾ ಶ್ರೀ ಶಾರದಾ ಕ್ರೆಡಿಟ್ ಕೋ-ಅಪರೇಟಿವ್ ಸೊಸೈಟಿಯಲ್ಲಿ ವಿಚಾರಿಸಬಹುದು.** -ಅಧ್ಯಕ್ಷರು, ವಿದ್ಯಾರ್ಥಿ ವೇತನ, ಶಿಕ್ಷಣ ಮತ್ತು ತರಬೇತಿ ವೇದಿಕೆ,

## ಶ್ರೀಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ.

### ಉದಯಚಂದ್ರ ಪ್ರತಿಭಾ ಪುರಸ್ಕಾರ 2016-17

ಸಂಘದ ಯುವವೇದಿಕೆಯ ಆಶ್ರಯದಲ್ಲಿ ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ ನಮ್ಮ ಸಮಾಜದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಉದಯಚಂದ್ರ ಪ್ರತಿಭಾ ಪುರಸ್ಕಾರ ನೀಡಲಾಗುವುದು. 2015-16ನೇ ಸಾಲಿನಲ್ಲಿ ಎಸ್.ಎಸ್.ಎಲ್.ಸಿ. ಮತ್ತು ಪದವಿಪೂರ್ವ ಮೂರು ವಿಭಾಗಗಳಲ್ಲಿ ಅಂತಿಮ ಪರೀಕ್ಷೆಗಳಲ್ಲಿ ಅತಿ ಹೆಚ್ಚು ಅಂಕಗಳಿಸಿದ ಒಬ್ಬೊಬ್ಬ ವಿದ್ಯಾರ್ಥಿಗಳಿಗೆ ಪುರಸ್ಕಾರ ನೀಡಲಾಗುವುದು. ಪದವಿ, ಸ್ನಾತಕೋತ್ತರ, ವೈದ್ಯಕೀಯ, ಕಾನೂನು, ಇಂಜಿನಿಯರಿಂಗ್‌ಗಳಲ್ಲಿ ರ್‍ಯಾಂಕ್ ಪಡೆದ ವಿದ್ಯಾರ್ಥಿಗಳನ್ನೂ ಪುರಸ್ಕರಿಸಲಾಗುವುದು. ಆದ್ದರಿಂದ ಶೇಕಡಾ 80ಕ್ಕಿಂತ ಹೆಚ್ಚು ಅಂಕ ಗಳಿಸಿದ ಮತ್ತು ರ್‍ಯಾಂಕ್ ವಿಜೇತ ವಿದ್ಯಾರ್ಥಿಗಳು ಅಂಕಪಟ್ಟಿಯ ಪ್ರತಿ, ವಿಳಾಸ, ಫೋನ್ ನಂಬ್ರ, ಇತ್ಯಾದಿ ದಾಖಲೆಗಳೊಂದಿಗೆ ಅರ್ಜಿಯನ್ನು ಅಧ್ಯಕ್ಷರು, ಯುವವೇದಿಕೆ, ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಶ್ರೀ ಶಾರದಾ ಮಂಟಪ, ಶಾರದಾನಗರ, ಕುಂಜಿಬೆಟ್ಟು ಉಡುಪಿ - 576 102 ಇಲ್ಲಿಗೆ **ತಾ.24-09-2016**ರೊಳಗೆ ಕಳುಹಿಸಿ ಕೊಡಬೇಕು. -ಅಧ್ಯಕ್ಷರು, ಯುವ ಮತ್ತು ಕ್ರೀಡಾ ವೇದಿಕೆ.

## ಶ್ರೀಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ.

### ಅಂಬಲ್ಪಾಡಿ ಕೃಷ್ಣ ರಾವ್ ಸ್ಮಾರಕ ವಿದ್ಯಾರ್ಥಿ ಪುರಸ್ಕಾರ 2016-17

ಉಡುಪಿ ಮತ್ತು ದ.ಕ. ಜಿಲ್ಲೆಗಳ ವಿಶ್ವವಿದ್ಯಾಲಯದಲ್ಲಿ ಕಲಿಯುವ ಸ್ನಾತಕೋತ್ತರ ಪದವಿಯಲ್ಲಿ ಎಲ್ಲಾ ವಿಷಯಗಳಲ್ಲಿ ರ್‍ಯಾಂಕ್ ಗಳಿಸಿದ ನಮ್ಮ ಸಮಾಜದ ಅರ್ಹ ವಿದ್ಯಾರ್ಥಿಗಳಿಗೆ ಪುರಸ್ಕಾರ ನೀಡಲಾಗುವುದು. ವಿದ್ಯಾರ್ಥಿಗಳು ತಮ್ಮ ಅರ್ಜಿಯನ್ನು ಬಿಳಿ ಹಾಳೆಯಲ್ಲಿ ಬರೆದು, ಅದರೊಟ್ಟಿಗೆ ರ್‍ಯಾಂಕ್ ಸಿಕ್ಕಿದ ಬಗ್ಗೆ ಸೂಕ್ತ ವಿವರದೊಂದಿಗೆ **ತಾ.24-09-2016**ರೊಳಗೆ ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಶ್ರೀ ಶಾರದಾ ಮಂಟಪ, ಶ್ರೀ ಶಾರದಾ ನಗರ, ಕುಂಜಿಬೆಟ್ಟು, ಉಡುಪಿ ಇಲ್ಲಿಗೆ ಕಳುಹಿಸಬೇಕಾಗಿ ವಿನಂತಿ.

- ಅಧ್ಯಕ್ಷರು, ವಿದ್ಯಾರ್ಥಿವೇತನ, ಶಿಕ್ಷಣ ಮತ್ತುತರಬೇತಿ ವೇದಿಕೆ,

# ಪಾವಂಜೆಯಲ್ಲಿ ವೇದೋಕ್ತ ಸಂಮಾನ, ಪ್ರಶಸ್ತಿ ಪ್ರದಾನ ಹಾಗೂ ಪುಸ್ತಕ ಬಿಡುಗಡೆ

ಶ್ರೀ ಕ್ಷೇತ್ರ ಪಾವಂಜೆಯ ಜ್ಞಾನಶಕ್ತಿ ಸುಬ್ರಹ್ಮಣ್ಯ ಸ್ವಾಮೀ ದೇವಸ್ಥಾನದ ಶ್ರೀ ಶಾರದ್ವತ ಯಜ್ಞಾಂಗಣದಲ್ಲಿ 24-07-2016ನೇ ಭಾನುವಾರ ನಮ್ಮ ಸಮಾಜದ 27 ಜನ ಸಾಧಕರನ್ನು ಗುರುತಿಸಿ ಅವರಿಗೆ ವೇದೋಕ್ತ ಸಂಮಾನ ಹಾಗೂ ಪಂಡಿತ ಎಚ್.ಸುಬ್ರಾಯ ಭಟ್ಟ ಪ್ರಶಸ್ತಿ ಪ್ರದಾನ ಕಾರ್ಯಕ್ರಮವು ಪಂಡಿತ ಎಚ್.ಸುಬ್ರಾಯ ಭಟ್ಟ ಸ್ಮಾರಕ ವೇದ ಪ್ರಚಾರ ಸಮಿತಿಯ ಆಶ್ರಯದಲ್ಲಿ ನೆರವೇರಿತು. ಸರ್ವಶ್ರೀ ಅಜ್ಜಾವರ ಶಿವರಾವ್, ಕುಂಜಾರು ಕೃಷ್ಣ ರಾವ್, ಶೆಡ್ಡೆ ಪ್ರಭಾಕರ ರಾವ್, ಎ.ಈಶ್ವರಯ್ಯ, ಕಟೀಲು ರಾಮಪ್ಪ ಉಪಾಧ್ಯಾಯ, ಕಟಪಾಡಿ ಶಿವರಾವ್, ಅಡೂರು ಸಂಜೀವ ರಾವ್ ಕುಕ್ಕಿಕಟ್ಟೆ ರಾಧಾಕೃಷ್ಣ ರಾವ್, ಚೊಕ್ಕಾಡಿ ಸುಂದರ ರಾವ್, ಕರಂಬಳ್ಳಿ ವೆಂಕಟರಾವ್, ಕಬ್ಬಿನಾಲೆ ಮೋಹನ ಹೆಬ್ಬಾರ್, ಡಾ|ವೆಂಕಪ್ಪಯ್ಯ ಕಿನ್ನಿಕಂಬಳ, ಶ್ರೀಮತಿ ರತ್ನಮ್ಮ ನಂದಿಕೂರು, ಶ್ರೀಮತಿ ಪ್ರಭಾವತಿ ರಾಮಚಂದ್ರ ಭಟ್, ಶ್ರೀಮತಿ ಪ್ರಭಾವತಿ ಭಾಸ್ಕರ ರಾವ್, ಶ್ರೀಮತಿ ಲಕ್ಷ್ಮೀ ಭಾಸ್ಕರ ರಾವ್ ಕೇದಿಗೆ, ಶ್ರೀಮತಿ ಶಾಂಭವಿ ರಂಗಯ್ಯ ಹೆಬ್ಬಾರ್ ಮುದ್ರಾಡಿ, ರಂಗಯ್ಯ ಹೆಬ್ಬಾರ್ ಮುದ್ರಾಡಿ, ಶ್ಯಾಮಸುಂದರ್ ಇನ್ನ, ಹೇರಂಜಾಲು ಸೀತಾರಾಮ ಮೇರ್ಟ, ಶಂಕರನಾರಾಯಣ ಹೆಬ್ಬಾರ್ ಕಬ್ಬಿನಾಲೆ, ಮಾಧವರಾವ್ ಹೊರನಾಡು, ವಿಷ್ಣುಮೂರ್ತಿರಾವ್ ಕಬ್ಬಿನಾಲೆ, ರವೀಂದ್ರರಾವ್ ಕುಂಭಾಶಿ, ಎಲ್ಲೂರು ಜಗದೀಶ ರಾವ್, ಎಮ್.ಅನಂತರಾಮ ಶರ್ಮ ಮೈಸೂರು ಹಾಗೂ ಕೊಕ್ರಾಡಿ ರಾಮ ರಾವ್ ಇವರನ್ನು ಸನ್ಮಾನಿಸಲಾಯಿತು. ನಂತರ ಡಾ| ವಸಂತ ಮಾಧವ ಕೊಡಂಚ ಇವರು ಬರೆದಿರುವ ಹಾಗೂ ಡಾ| ಮಹಾಬಲೇಶ್ವರ ರಾವ್, ಪ್ರಾಂಶುಪಾಲರು, ಮಣಿಪಾಲ ಪದವಿಪೂರ್ವ ಕಾಲೇಜು ಇವರು ಕನ್ನಡಕ್ಕೆ ಅನುವಾದಿಸಿರುವ **"ಕರ್ನಾಟಕದ ಸಾಂಸ್ಕೃತಿಕ ಚರಿತ್ರೆಯಲ್ಲಿ ಸ್ಥಾನಿಕರ ಚಾರಿತ್ರಿಕ ಮಹತ್ವ"** ಎಂಬ ಪುಸ್ತಕದ ಬಿಡುಗಡೆಯ ಸಮಾರಂಭ ನಡೆಯಿತು. ನಂತರ ಪ್ರಸಾದ ಭೋಜನದೊಂದಿಗೆ ಕಾರ್ಯಕ್ರಮವು ಮುಕ್ತಾಯವಾಯಿತು.

## ಶುಭಜನನ

ಸತಾರದ ಕೊರೆಗಾಂವ್‌ನಲ್ಲಿ ವಾಸವಾಗಿರುವ ಕುಂಜಾರು ಶ್ರೀ ರಾಘವೇಂದ್ರ ರಾವ್ (ದಿ|ಕುಂಜಾರು ವಾಸುದೇವರಾವ್ ಹಾಗೂ ಶ್ರೀಮತಿ ಶಶಿಕಲಾರವರ ಪುತ್ರ) ಹಾಗೂ ಶ್ರೀಮತಿ ಅನುರಾಧಾ ದಂಪತಿಗಳಿಗೆ ದಿನಾಂಕ 27-08-2016ರಂದು ಗಂಡುಮಗುವಿನ ಜನನವಾಗಿರುತ್ತದೆ.

## ಬ್ರಹ್ಮೋಪದೇಶ

ಬಪ್ಪನಾಡಿನ ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದ ಜ್ಞಾನಮಂದಿರದಲ್ಲಿ ಶ್ರೀ ಎಸ್.ಸಂಪತ್ ಕುಮಾರ್ (ಶ್ರೀ ಶುಂಠಿಪಾಡಿ ಮೋಹನ್ ರಾವ್ ಮತ್ತು ಶ್ರೀಮತಿ ಶಾರದಾರವರ ಪುತ್ರ) ಹಾಗೂ ಶ್ರೀಮತಿ ಶರಣ್ಯ (ಶ್ರೀ ಪಡುಮಲೆ ಶ್ರೀನಿವಾಸ ರಾವ್‌ರವರ ಪುತ್ರಿ) ಇವರ ಸುಪುತ್ರ ಚಿ| ಸಾಕೇತನ ಬ್ರಹ್ಮೋಪದೇಶವು ತಾ.10-07-2016ನೇ ಭಾನುವಾರ ನೆರವೇರಿತು.

## ಶುಭವಿವಾಹ

ಬೆಂಗಳೂರಿನ ಶ್ರೀಮತಿ ಸುಧಾ ಮತ್ತು ಶ್ರೀ ಮನೋಹರ್ ಧಾರೇಶ್ವರ್ ಇವರ ಪುತ್ರಿ **ಸಮನ್ವಿತಾ** ಹಾಗೂ ಶ್ರೀಮತಿ ಕಾಂತಿ ಮತ್ತು ಶ್ರೀ ದೇವರಾವ್ ನಂದಳಿಕೆಯವರ ಪುತ್ರ **ವಿನೀತ್** ಇವರ ವಿವಾಹವು ತಾ.11-07-2016ನೇ ಸೋಮವಾರ ಬೆಂಗಳೂರು ಪದ್ಮನಾಭನಗರದ ಸಹಕಾರ ಸಮುದಾಯ ಭವನದಲ್ಲಿ ನೆರವೇರಿತು

## ವಿದೇಶಪ್ರಯಾಣ

ನಮ್ಮ ಸಮಾಜದ ಪ್ರಖ್ಯಾತ ಯಕ್ಷಗಾನ ಕಲಾವಿದ ಚೆಂಡೆಯ ಗಂಡುಗಲಿ ಶ್ರೀ ಕೋಟ ಶಿವಾನಂದ ಇವರು ತಾ.09-09-2016 ರಂದು ಪ್ರಥಮಬಾರಿಗೆ ತಮ್ಮ ಪ್ರದರ್ಶನವನ್ನು ನೀಡಲು ವಿದೇಶಕ್ಕೆ ತೆರಳಿದ್ದಾರೆ.

# 75ನೇ ವರ್ಷದ ಗಣೇಶೋತ್ಸವ



ಉಡುಪಿ ತೆಂಕಪೇಟೆಯಲ್ಲಿ ಮೆಜೆಸ್ಟಿಕ್ ಪ್ರೆಸ್ ಎಂಬ ಪ್ರಖ್ಯಾತ ಪ್ರಿಂಟಿಂಗ್ ಪ್ರೆಸ್‌ನಲ್ಲಿ ಅದರ ಮಾಲೀಕರಾದ ಶ್ರೀ ಕೆ ಶ್ರೀಧರ್ ರಾವ್ ಹಾಗು ಶ್ರೀಮತಿ ಪ್ರತಿಭಾ ರವರು 75ನೇ ವರ್ಷದ ಗಣೇಶೋತ್ಸವವನ್ನು ನೆರವೇರಿಸಿದರು. ಶ್ರೀ ಶ್ರೀಧರರಾಯರ ಅಜ್ಜ ಹಾಗೂ ಶ್ರೀ ಭಾಸ್ಕರ ರಾಯರ ತಂದೆ ಶ್ರೀ ರಾಘವೇಂದ್ರ ರಾಯರು (ಶ್ರೀ ಯೋಗೀಂದ್ರರಾಯರು) ಇದನ್ನು ಸ್ವಾತಂತ್ರ್ಯಪೂರ್ವದಲ್ಲೇ ಆರಂಭಿಸಿದ್ದು ಮನೆತನದವರು ಈ ಸಂಪ್ರದಾಯವನ್ನು ಇಷ್ಟು ವರ್ಷ ನಡೆಸಿಕೊಂಡು ಬಂದಿರುವುದು ಅಭಿನಂದನೀಯವಾಗಿದೆ. ಶ್ರೀ ಯೋಗೀಂದ್ರರಾಯರು ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘದ ಪ್ರಥಮ ಅಧ್ಯಕ್ಷರು. ಅಂದಿನ ದಿನಗಳಲ್ಲಿ ಸಂಘದ ಕಚೇರಿಯು ಮೆಜೆಸ್ಟಿಕ್ ಪ್ರೆಸ್‌ನಲ್ಲಿತ್ತು.

# ಶ್ರೀ ಯಕ್ಷದೇವ ಮಿತ್ರ ಮಂಡಳಿ, ಬೆಳುವಾಯಿ

ಯಕ್ಷಗಾನ ಕಲಾಸೇವೆಗೆಂದೇ ಸಾಕಾರಗೊಂಡ ಸಂಸ್ಥೆಯಿದು. ಕಲಾವಿದ ಹಾಗೂ ವೃತ್ತಿಪರ ಛಾಯಾಗ್ರಾಹಕ ಬೆಳುವಾಯಿಯ ಶ್ರೀ ದೇವಾನಂದ ಭಟ್ ಇವರು ಇದರ ಕಾರ್ಯಾಧ್ಯಕ್ಷರು. ಯಕ್ಷಗಾನ ಪ್ರದರ್ಶನ ಮಾತ್ರವಲ್ಲದೆ ಸಮಗ್ರವಾಗಿ ಈ ಕಲೆಯ ಬೆಳವಣಿಗೆಗೆ ಏನೆಲ್ಲ ಬೇಕೋ ಅದನ್ನು ಪ್ರಾಮಾಣಿಕತೆಯಿಂದ ಈ ಸಂಸ್ಥೆ ಕಳೆದ 19 ವರುಷಗಳಿಂದ ಮಾಡಿಕೊಂಡು ಬರುತ್ತಿದೆ. ಯಕ್ಷಗಾನದ ವಿವಿಧ ಪ್ರಾಕಾರಗಳ ಪ್ರದರ್ಶನ, ಮನೆಗಳಲ್ಲಿ ಚಾವಡಿ ಕೂಟವೆಂಬ ವಿಶಿಷ್ಟ ಚಟುವಟಿಕೆ, www.yakshadeva.com ಎಂಬ ವೆಬ್ ಸೈಟ್‌ನ ನಿರ್ವಹಣೆ, ಯಕ್ಷಕಲಾವಿದರನ್ನು ಗುರುತಿಸುವುದು ಹಾಗೂ ಸನ್ಮಾನ, ಅರಳು ಪ್ರತಿಭೆಗಳನ್ನು ಗುರುತಿಸುವುದು ಹಾಗೂ ಸನ್ಮಾನ ಇತ್ಯಾದಿ ಕಾರ್ಯಕ್ರಮಗಳನ್ನು ಪ್ರತಿ ವರ್ಷವೂ ನಡೆಸಿಕೊಂಡು ಬರುತ್ತಿದೆ. ಈ ವರ್ಷ ತಾ. 26-07-2016ರಿಂದ ತಾ.31-07-2016ರ ತನಕ ಮೂಡುಬಿದ್ರೆಯ ಪದ್ಮಾವತೀ ಕಲಾಮಂದಿರದಲ್ಲಿ 6 ದಿನಗಳ ಕಾಲ ಕಟೀಲಿನ ಆರು ಮೇಳದವರಿಂದ ಯಕ್ಷಗಾನ ಪ್ರದರ್ಶನ ನೆರವೇರಿತು. ತಾ. 31-07-2016 ರಂದು ನಡೆದ ಸಮಾರೋಪ ಸಮಾರಂಭದಲ್ಲಿ ಉಡುಪಿಯ ಡಾ| ವೈ. ಸುದರ್ಶನ ರಾವ್ ಇವರು ಅತಿಥಿಗಳಾಗಿ ಭಾಗವಹಿಸಿ ಕಲಾವಿದರನ್ನು ಪ್ರೋತ್ಸಾಹಿಸಿದರು.

## ನಿಧನ

ಉಡುಪಿ ಕುತ್ಪಾಡಿ ನಿವಾಸಿ ಶ್ರೀ ಕ್ಯಾದಿಗೆ ರಾಜಗೋಪಾಲ ರಾಯರು ತಾ.20-08-2016 ಶನಿವಾರದಂದು ಸ್ವಗೃಹದಲ್ಲಿ ನಿಧನ ಹೊಂದಿದರು.

**** ****

ಬರೋಡದಲ್ಲಿ ವಾಸವಾಗಿದ್ದ ಶ್ರೀ ನಂದಿಕೂರು ಆನಂದರಾಯರು ತಾ.29-06-2016ರಂದು ನಿಧನ ಹೊಂದಿದರು.

## ಪ್ರತಿಭಾ ಪುರಸ್ಕಾರ

ಕೊಡುಗೈ ದಾನಿ, ಬೆಂಗಳೂರಿನ ಶ್ರೀ ಬೆಳ್ಳೆ ರವೀಂದ್ರನಾಥರಾಯರು ದಿ| ಬೆಳ್ಳೆ ಭವಾನಿ ರಾವ್ ಹಾಗೂ ದಿ| ಬೆಳ್ಳೆ ಪದ್ಮಾವತಿ ವಿಠಲ ರಾವ್ ಸ್ಮರಣಾರ್ಥ ಮೂಡುಬೆಳ್ಳೆ ಪರಿಸರದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರತೀ ವರ್ಷವೂ ಪ್ರತಿಭಾ ಪುರಸ್ಕಾರ ಹಾಗೂ ವಿದ್ಯಾರ್ಥಿವೇತನವನ್ನು ವಿತರಿಸುತ್ತಿದ್ದಾರೆ. ಈ ವರ್ಷ ಈ ಕಾರ್ಯಕ್ರಮವು ಮೂಡುಬೆಳ್ಳೆಯ ಗೀತಾಮಂದಿರದಲ್ಲಿ ತಾ.06-08-2016ನೇ ಶನಿವಾರ ಶ್ರೀ ವೈಭುವನೇಂದ್ರರಾಯರ ಅಧ್ಯಕ್ಷತೆಯಲ್ಲಿ ನೆರವೇರಿತು. ಮೂಡುಬೆಳ್ಳೆಯ ದಾಸಕೃಪಾ ಕುಟುಂಬದ ಎಲ್ಲಾ ಸದಸ್ಯರು ಉಪಸ್ಥಿತರಿದ್ದರು.



Buying and selling shares as easy as checking your emails

Sharekhan Online Trading Account Features:
- Your bank account gets directly linked to trading account
- Can do direct fund transfer from any of 11 leading banks
- Choose your trading account, Classic, FastTrade, TradeTiger
- Apply online for Stocks, Mutual Funds and IPO's

Contact : Pradeep Rao K.
Tel : 0824 2412903, 9448191028
Navadurga Share Services
Email : navdurga@bp.sharekhan.com

Sharekhan YOUR GUIDE TO THE FINANCIAL JUNGLE

Visit : www.sharekhan.com

ದೇವಿಕೃಪಾ ಏಜೆನ್ಸೀಸ್, ನಂದಿಕೂರು
ಫೋನ್ : 2556536 (R), 2555466 (O), Mobile : 9845149521

ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.
ಪ್ರೊ| ಎಸ್. ಜನಾರ್ದನ್ ರಾವ್
ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು

ಶುಭಾಶಯಗಳೊಂದಿಗೆ
ಹೆಬ್ಬಾರ್ ಎಂಟರ್‌ಪ್ರೈಸಸ್
ವೈಷ್ಣವಿ ಬಿಲ್ಡಿಂಗ್, ವಾದಿರಾಜ ರಸ್ತೆ, ಉಡುಪಿ-576101.
ನಮ್ಮಲ್ಲಿ ಶುಭ ಸಮಾರಂಭಗಳಿಗೆ ಬೇಕಾಗುವ ಶಾಮಿಯಾನ, ಕುರ್ಚಿ, ಟೇಬಲ್, ಪಾತ್ರೆ, ಅಡುಗೆ ಹಾಗೂ ಕ್ಯಾಟರಿಂಗ್ ವ್ಯವಸ್ಥೆ ಲಭ್ಯವಿದೆ.
ಪ್ರೊ : ಮಂಜುನಾಥ ಹೆಬ್ಬಾರ್ ಸಂಪರ್ಕ ಸಂಖ್ಯೆ 9611099894


RAJESH POWER PRESS
PRINTERS & PUBLISHERS
DARBE, PUTTUR, DA. KA. - 574 202.
KARNATAKA STATE, SOUTH INDIA.
Ph : (08251) 231696, 231697 & 322386
E-mail : msraghunathrao@hotmail.com
QUALITY FIRST AND ALWAYS

With Best Complimemts From
SRI M. SHAILESH RAO
B.E., Civil
Ph : 9448624324
Civil Engineer & Contractor
SRI MALAVIKA ASSOCIATES
KALSANKA-UDUPI ROAD, UDUPI.
Website : shreemaalavikaassociates.com

# ಸೀಮೊಲ್ಲಂಘನ- ಪೂರ್ವ ಸಮುದ್ರದಾಚೆಗೆ

- ಜಿ ಕೆ.ಕೋಲ್ಪೆ

ಮಠಾಧೀಶರು 'ಸೀಮೊಲ್ಲಂಘನ ಅಂದರೆ ಸಾಗರ ದಾಟಿ ವಿದೇಶಕ್ಕೆ ಹಾರಿದರೆ, ಅಪವಾದ ಎದುರಿಸಬೇಕಾಗುತ್ತದೆ. ನಮ್ಮಂತವರು ಹಾರಿದರೆ ಅದು ವಿದೇಶ ಪ್ರವಾಸವಾಗುತ್ತದೆ. ಈ ದಿಸೆಯಲ್ಲಿ ನಾನು, ನನ್ನವಳು, ಅಳಿಯ, ಮಗಳು,ಮೊಮ್ಮಗಳು ಇತರ 23 ಮಂದಿಯೊಂದಿಗೆ ಪ್ರವಾಸಿಗರಾಗಿ ಮಂಗಳೂರು ನಿರ್ಮಲಾ ಟ್ರಾವೆಲ್ಸ್‌ರವರ ಸಹ ಸಂಸ್ಥೆ 'ವಾತಿಕಾ ಇಂಟರ್ನೇಶನಲ್ ಟ್ರಾವೆಲ್ಸ್‌ರವರ ಸಹಯೋಜನೆಯಲ್ಲಿ ಪೂರ್ವ ಸಮುದ್ರದ ಮೂರುದೇಶಗಳಾದ ಮಲೇಷಿಯಾ, ಸಿಂಗಾಪುರ ಮತ್ತು ಥೈಲ್ಯಾಂಡ್‌ನ ಪ್ರಯಾಣವನ್ನು ತಾ.11-05-2016ರಂದು ಮಂಗಳೂರಿನಿಂದ ಪ್ರಾರಂಭಿಸಿದೆವು, ರಾತ್ರಿ ಕೊಲಂಬೋ ತಲಪಿದೆವು. ಅಲ್ಲಿ ಸುಮಾರು 3½ ತಾಸು ಕಾದುಕುಳಿತು ಇನ್ನೊಂದು ಬೃಹತ್ ವಿಮಾನದಲ್ಲಿ ಸಾಗಿ ತಾ.12-05-2016 ರ ಬೆಳಗ್ಗೆ ಮಲೇಷ್ಯಾ ರಾಜಧಾನಿ ಕೌಲಾಲಂಪುರ (KUALALUMPUR) ತಲಪಿ, ಮೊದಲೇ ವ್ಯವಸ್ಥೆಯಾದಂತೆ, ಪುತ್ರಜಯಾ ಎಂಬ ಪಟ್ಟಣಕ್ಕೆ ಮಲೇಷಿಯಾ ಸುಂದರಿ ಶ್ರೀಮತಿ ಮಲ್ಲಿಕಾ ಎಂಬ ಮಾರ್ಗದರ್ಶಕಿಯ (GUIDE) ನೇತೃತ್ವದಲ್ಲಿ ನಮಗಾಗಿ ಕಾದಿರಿಸಿದ ಬಸ್ಸಿನಲ್ಲಿ ಕುಳಿತೆವು.


ಮುಂದೆ-ನಮ್ಮ ಪ್ರಯಾಣ ಜೆಂಟಿಂಗ್ ಹೈಲೇಂಡ್ ಕಡೆಗೆ (Genting Hiland) ಕಡೆಗೆ. ಇದೊಂದು ಅದ್ಭುತವಾದ ಪರ್ವತದ ಮೇಲಿನ ವಿಹಾರಧಾಮ. ಮಲಯ ಎಂದರೆ ಪರ್ವತ ಸುಮಾರು 3.5 ಕಿ.ಮೀ ಎತ್ತರದ ಪರ್ವತದ ಮೇಲೆ ಈ ವಿಹಾರಧಾಮವಿದೆ. ಇದು 1967ರಲ್ಲಿ, ಜೆಮಟಿಂಗ್ ಹೋಟೇಲ್ ಮತ್ತು ಜೆಂಟಿಂಗ್ ಗ್ರಾಂಟ್ (5 ಸಾದಾ ಹೋಟೇಲ್ ಗುಂಪು ಹಾಗೂ 5 ಸ್ಟಾರ್ ಹೋಟೇಲ್‌ಗಳ ಗುಂಪು) ಹೊಂದಿದ್ದು, 6118 ಕೊಠಡಿಗಳಿರುವ, ಪ್ರಪಂಚದಲ್ಲಿ ಒಂದನೇ ಸ್ಥಾನದ ಹೋಟೇಲ್ ಸಮುಚ್ಚಯ ವಾಗಿದೆ. ಒಂದೆರಡು ವರ್ಷದೊಳಗೆ 10 ಸಾವಿರ ಕೊಠಡಿಗಳಿಗೆ ವಿಸ್ತರಿಸುವ ಕಾಮಗಾರಿ ಪ್ರಾರಂಭವಾಗಿದೆ. ಮೇಲೇರಲು ನಾಲ್ಕು ತರದ ದಾರಿಗಳಿವೆ. ಕೇಬಲ್ ಕಾರ್‌ನಲ್ಲಿ 3.5 ಕಿ.ಮೀ ಎತ್ತರವನ್ನು 15 ನಿಮಿಷಗಳಲ್ಲಿ (ಪ್ರಪಂಚದಲ್ಲೇ ಮೊದಲ ಅತೀ ವೇಗದ ವ್ಯವಸ್ಥೆ) ತಲುಪಬಹುದು. (ಇದು ಬೆಳಗ್ಗೆ 7.30 ಯಿಂದ ರಾತ್ರಿ 12 ರ ತನಕ ಚಾಲನೆ ಇರುತ್ತದೆ). ಎರಡನೆಯದಾಗಿ, ರಸ್ತೆಯಲ್ಲಿ ಸುತ್ತ ಬಳಸಿ (ಘಟ್ಟ ಪ್ರದೇಶ) ಒಂದುವರೆ ತಾಸಿನ ಪ್ರಯಾಣ ಮೂರನೆಯದ್ದು-ಟ್ರೆಕ್ಕಿಂಗ್ (ಸುಮಾರು 8-9 ತಾಸಿನ ಪ್ರಯಾಣ. ನಾಲ್ಕನೆಯದ್ದು- ಹೆಲಿಕಾಪ್ಟರ್ (ಬೆಟ್ಟದ ಮೇಲೆ ವಿಶಾಲವಾದ ಹೆಲಿಪ್ಯಾಡ್ ಇದೆ.) ನಾವು ಕೇಬಲ್ ಕಾರಿನಲ್ಲಿ (ಇದಕ್ಕೆ ಗೋಂಡೋಲಾ ಎನ್ನುತ್ತಾರೆ)ಕೂತು ಬೆಟ್ಟಗಳ ಮೇಲೇರುತ್ತಾ, ರುದ್ರ ರಮಣೀಯ ದೃಶ್ಯಗಳನ್ನು ನೋಡುತ್ತಾ, ಮೋಡದ ಒಳಗೆ ಮರೆಯಾಗುತ್ತಾ ಜೆಂಟಿಂಗ್ ಎಂಬ ಸ್ವರ್ಗವನ್ನು ಪ್ರವೇಶಿಸಿದೆವು. ಇಲ್ಲಿ ಕೊಠಡಿ ಸಿಗಬೇಕಾದರೆ 3-4 ತಿಂಗಳ ಮೊದಲೇ ಕಾದಿರಿಸಬೇಕು ಇದು ಚೈನಾ ಮೂಲದ ತಾನ್‌ಸ್ರೀ (ಡಾ ಲಿಮ್ ಗೋಹ್‌ತೊಂಗ್ (TANSRI (DR) LIM GOHTONG (1918-2007) ರವರ ಖಾಸಗಿ ಜಾಗವಾಗಿದ್ದು ಮಲೇಷ್ಯಾದ ರಾಜ ದಾನವಾಗಿ ಕೊಟ್ಟದಂತೆ. ಚೈನಾದಿಂದ ಕೆಲಸ ಹುಡುಕಿಕೊಂಡು ಬಂದ ಯುವಕ ಲಿಮ್ ಕಟ್ಟಡ ಕೆಲಸದಲ್ಲಿ ಪರಿಣತಿ ಹೊಂದಿದ್ದು, ರಾಜನ ಅರಮನೆ ಕಟ್ಟುವಲ್ಲಿ ತನ್ನ ಕೌಶಲ ತೋರಿಸಿದ ಕಾರಣ ರಾಜ ಪ್ರಸನ್ನನಾಗಿ ಇನಾಮು ಕೊಡಲು ಮುಂದಾದಾಗ, ಈ ಬೆಟ್ಟವನ್ನು ಕೇಳಿದನಂತೆ. ಆಶ್ಚರ್ಯಚಕಿತನಾದ ರಾಜ. ಅವನ ಕನಸಿನ ಯೋಜನೆಯನ್ನು ಮೆಚ್ಚಿ ಈ ಜಾಗವನ್ನು ದಾನ ಮಾಡಿದನಂತೆ. ಡಾ. ಲಿಮ್‌ರವರ ಕನಸಿನಲೋಕ ಭೂಮಿ-ಆಕಾಶಮುಟ್ಟುವ (GENTING) ಈ ಜಾಗದಲ್ಲಿ ಸಾಕಾರವಾಯಿತಂತೆ. ಈ ಸಮುಚ್ಚಯವನ್ನು ಚೈನಾ ದೇಶದವರ ಆಟೋಟ-ವ್ಯಾಪಾರ ವಹಿವಾಟು-ವಿಶ್ರಾಂತಿಧಾಮವಾಗಿ ಕೊಡುಗೆ ಇತ್ತು, ಪ್ರಪಂಚದಾದ್ಯಂತ ಬರುವ ಪ್ರವಾಸಿಗರಿಗೆ ಪ್ರವೇಶಕೊಟ್ಟಿದ್ದಾರೆ. ಚೈನಾದವರಿಗೆ ಕ್ಯಾಸಿನೋಗಳಲ್ಲಿ ಬೆಟ್ಟಿಂಗ್ ಆಟ ಬಹುಪ್ರೀತಿ. ಪ್ರಪಂಚದಲ್ಲೇ ದೊಡ್ಡ ಕ್ಯಾಸಿನೋ ಇಲ್ಲಿದೆ. ಚೀನಿಯರು ಆಟದೊಂದಿಗೆ, ವ್ಯಾಪಾರ-ವ್ಯವಹಾರಗಳಲ್ಲಿ ಹಣ ತೊಡಗಿಸುತ್ತಾರೆ. ನಾವು ಆ ರಾತ್ರಿ ಅಲ್ಲಿಯ 'ಪ್ರಪಂಚದ ಮೊದಲ ಹೋಟೇಲ್ ಎಂಬ ಪ್ರಖ್ಯಾತಿಯ ಹೋಟೇಲಿನಲ್ಲಿ ಉಳಕೊಂಡೆವು (FIRST WORLD HOTEL) ಮೂರನೇ ದಿನ ತಾ.13-05-2016ರಂದು ಬೆಳಗ್ಗಿನ ಉಪಹಾರ ಮುಗಿಸಿ ಕ್ಯಾಸಿನೋಗಳನ್ನು ಸಂದರ್ಶಿಸಿ, ಭೂತ ಬಂಗ್ಲಗೆ (Hanuted horese)ಹಣಕೊಟ್ಟು ಭಯಪಟ್ಟುಕೊಳ್ಳುವ ಆಟದ ಮನೆ) ಭೇಟಿಕೊಟ್ಟು, ಹಿಮಗಟ್ಟಿದ ಪ್ರಪಂಚಕ್ಕೆ ನುಗ್ಗಿ-ಕೆಲವರು ಧರಗುಟ್ಟುತ್ತಾ ಹಿಂದಿರುಗಿದೆವು. ಮಧ್ಯಾಹ್ನದ ಭೋಜನ ಮುಗಿಸಿ ಕೆಳಗೆ ಇಳಿಯುವ ಗೊಂಡೋಲಾಗಳಲ್ಲಿ ಕೂತು ಕೆಳಗಿಳಿದು, ಬಾಟುಗುಹೆ (BATU CAVES) ಸಂದರ್ಶನಕ್ಕೆ ತಯಾರಾದೆವು. ಬಾಟು ಎಂದರೆ ಸುಣ್ಣದಕಲ್ಲು. ಬಾಟು ಗುಹಾಬೆಟ್ಟವು ನೈಸರ್ಗಿಕವಾಗಿದ್ದು 288 ಮೆಟ್ಟಲುಗಳನ್ನು ಹೊಂದಿದೆ. ತಳಭಾಗದಲ್ಲಿ 42 ಮೀಟರ್ ಎತ್ತರದ ಕಾರ್ತಿಕೇಯನ ವಿಗ್ರಹವಿದೆ. ನೇಪಾಳದ ಶಿವನ ವಿಗ್ರಹ ಬಿಟ್ಟರೆ ಇದೇ ದೊಡ್ಡ ವಿಗ್ರಹವಂತೆ. ಮೇಲೆ ಬಾಟು ಗುಹೆಯಲ್ಲಿ ಮುರುಗ (ಕಾರ್ತಿಕೇಯ/ಸುಬ್ರಹ್ಮಣ್ಯ) ಹಾಗೂ ಶ್ರೀವಲ್ಲಿ ದೇವಿಯ ವಿಗ್ರಹಗಳಿವೆ. ಬೆಟ್ಟದ ನಾಲ್ಕು ಮೂಲೆಯಲ್ಲೂ ಗುಹೆ ಒಳಗೆ ಬೆಳಕು ಬರುವ ಹಾಗೆ ಪ್ರಾಕೃತಿಕವಾಗಿ ತೆರೆದುಕೊಂಡಿದೆ ತಮಿಳುನಾಡಿನ ಮಂದಿ ಮುಖ್ಯವಾಗಿ ಇಲ್ಲಿ ಸೇವೆ ನಡೆಸಿ ಧನ್ಯತಾ ಭಾವದೊಂದಿಗೆ ಹಿಂತಿರುಗುತ್ತಾರೆ. ಪ್ರವಾಸಿಗರು ಈ ಗುಹಾಂತರ್ಗತ ದೇವಾಲಯದ ಪ್ರಕೃತಿ ಸೌಂದರ್ಯ ಸವಿದು ಸಂಭ್ರಮಿಸುತ್ತಾರೆ. ಬೆಟ್ಟ ಇಳಿದು ರಾತ್ರಿ ಗ್ರೇಂಡ್ ಸೀಸನ್ ಹೋಟೇಲಿನಲ್ಲಿ ವಿಶ್ರಮಿಸಿದೆವು

ತಾ.14-05-2016 ರಂದು ಬೆಳಗ್ಗೆ 10 ಗಂಟೆಗೆ ಕೌಲಾಲಂಪುರ ಪಟ್ಟಣದ ವೀಕ್ಷಣೆಗೆ ಹೊರಟೆವು. ಸ್ವಾತಂತ್ರ್ಯ ಯುದ್ಧದಲ್ಲಿ ಮಾಡಿದ ವೀರಯೋಧರ ಸ್ಮರಣಾರ್ಥವಾಗಿ ಕಟ್ಟಿದ ಸ್ಮಾರಕವನ್ನು ನೋಡಿದೆವು. ಆಗಸ್ಟ್ 31ನೇ ತಾರೀಕು ಇಲ್ಲಿಯ ರಾಷ್ಟ್ರೀಯ ದಿನ. ಇಲ್ಲಿಯ ರಾಷ್ಟ್ರೀಯ ಆಟಗಳು ಫುಟ್‌ಬಾಲ್ ಮತ್ತು ಬ್ಯಾಂಡ್‌ಮಿಂಟನ್. ಇಲ್ಲಿ ಹಗಲೂ-ರಾತ್ರಿ ದ್ವಿಚಕ್ರವಾಹನ ಸವಾರರು ವಾಹನದ ಹೆಡ್‌ಲೈಟ್ (Head Light) ಉರಿಸಲೇಬೇಕು. ಚೈನಾದವರ (ಬುದ್ಧ) ದೇವಸ್ಥಾನ ನೋಡಿದೆವು, ಬೃಹತ್ ಪ್ರಮಾಣದ ಚಾಕ್ಲ್ಯೋಲೇಟ್ ಮಾರಾಟ ಕೇಂದ್ರವನ್ನು (Coca boutique) ಸಂದರ್ಶಿಸಿದೆವು. ಕೌಲಾಲಂಪುರದ ಜೋಡಿ ಕಟ್ಟಡ (Twin Towers) ನೋಡಲೇಬೇಕಾದ್ದು. 88 ಅಂತಸ್ತು ಇರುವ ಈ ಕಟ್ಟಡವನ್ನು ಬದ್ಧವೈರಿಗಳಾದ ಕೊರಿಯನ್ಸ್ ಮತ್ತು ಜಪಾನಿಯರು ಪೆಟ್ರೋಮೆಟ್ ಎಂಬ ಕಂಪೆನಿಯ ಟೆಂಡರ್ (tender) ನಲ್ಲಿ ಬಾಗವಹಿಸಿ, ಒಂದೊಂದು ಕಟ್ಟಡದ ಕಾಮಗಾರಿ ಪಡೆದು ಸ್ಪರ್ಧೆಯಲ್ಲಿ 3 ವರ್ಷದೊಳಗೆ ಕಂಪೆನಿಗೆ ಬೇಕಾಗುವ ಹಾಗೆ ಪೂರ್ತಿ ಸ್ಟೆನ್‌ಲೆಸ್‌ಸ್ಟೀಲ್ (Stainless steel) ಉಪಯೋಗಿಸಿ ಕಟ್ಟಿದ್ದಾರಂತೆ. ಮಧ್ಯದಲ್ಲಿ 44 ನೇ ಅಂತಸ್ತಿನಲ್ಲಿ ಎರಡೂ ಕಟ್ಟಡಕ್ಕೆ ಸಂಪರ್ಕ ಸೇತುವೆ ಬೆಸೆಯಲಾಗಿದೆ. ಇದರಲ್ಲಿ 3 ಅಂತಸ್ತು ವ್ಯಾಪಾರ ವಹಿವಾಟುಗಳಿಗೂ 560 ಖಾಸಗಿ ಕಛೇರಿಗಳಿಗೂ ಕೊಟ್ಟು ಉಳಿದದ್ದು ಪಟ್ರೋಮೆಟ್ ಕಛೇರಿಗಳಿಗೆ ಉಪಯೋಗಿಸಲಾಗಿದೆಯಂತೆ. ಇದರ ನಂತರ (KL TOWER (JEWEL in The Sky ) ಎಂಬ ದಕ್ಷಿಣ ಏಷ್ಯಾದ ಬಹಳ ಎತ್ತರದ ಮಿನಾರನ್ನು (267 meter) menara Kaulalampur ವೀಕ್ಷಿಸಿದೆವು. (ಮುಖ್ಯವಾಗಿ ಇದು ಟೆಲಿಕಮ್ಯೂನಿಕೇಶನ್ ಉದ್ದೇಶಕ್ಕಾಗಿ ಕಟ್ಟಿದ ಕಟ್ಟಡ) ಲಿಫ್ಟ್ (Lift) ನಲ್ಲಿ 58 ಸೆಕೆಂಡುಗಳಲ್ಲಿ ಮೇಲೇರಿ 50 ಸೆಕೆಂಡಲ್ಲಿ ಹಿಂದಿರುಗಬಹುದು. ಮೇಲಿಂದ ಕೌಲಾಲಂಪುರ ಸಿಟಿಯ ಸೊಬಗನ್ನು ನೋಡಿ ಆಶ್ಚರ್ಯಪಟ್ಟೆವು. ಸಂಜೆ ಪಾರ್ಕ್‌ಸನ್ (Parkson) ಮಾರ್ಕೇಟಲ್ಲಿ ಅಡ್ಡಾಡಿದೆವು.

(ಮುಂದಿನ ಸಂಚಿಕೆಯಲ್ಲಿ ಸಿಂಗಾಪುರ)


SAMPATH KUMAR
Mobile : 9741508881
8884873233

TRISHULINI TOURIST
*The Tourist People*
Near Mahishamardhini Temple, Bailur, Udupi.
ALL TYPES OF VEHICLES AVAILABLE FOR HIRE



With Best Compliments From :
Ph : 98459 92859
Ganesh Hebbar & Associates
CHARTERED ACCOUNTANT
S.M.S.P. Complex, Udupi - 576 101.



ಶ್ರೀ ಮಾತಾ ಜ್ಯೋತಿಷ್ಯಾಲಯ
ಶ್ರೀ ಸುಬ್ರಹ್ಮಣ್ಯ ಕ್ಷೇತ್ರ, ಚೌಳಿಕೆರೆ, ಬಾರ್ಕೂರು.
ಬಾರ್ಕೂರು ಸಂಸ್ಥಾನದ ಪಾರಂಪರ್ಯ ನಾಗಬ್ರಹ್ಮ ಹಾಗೂ ದುರ್ಗೆಯ ದರ್ಶನ ಪಾತ್ರಿಗಳು, ಜೋತಿಷ್ಯರು ಮತ್ತು ಪುರೋಹಿತರು ಅಷ್ಟ ಮಂಗಲ ಪ್ರಶ್ನೆ, ಆರೂಢರಾಶಿ ಪ್ರಶ್ನೆ, ಜಾತಕ, ನಾಗದರ್ಶನ ಮತ್ತು ಸರ್ಪಸಂಸ್ಕಾರ, ಆಶ್ಲೇಷಬಲಿ, ಪ್ರತಿಷ್ಠೆ, ಶಾಂತಿ ಹಾಗೂ ಶುಭ ಕರ್ಮಗಳಿಗೆ ಅಗತ್ಯವಿದ್ದಲ್ಲಿ ವಿಚಾರಿಸಿ.
ಶ್ರೀ ರಾಘವೇಂದ್ರ ಭಟ್ (ಫೋನ್ : 9632302234.)




ಎಮ್. ದೇವಾನಂದ್ ಭಟ್
Cell : 9845644556
9483913344

ಶೋಭಾ ಡಿಜಿಟಲ್
ಸ್ಟುಡಿಯೋ & ವೀಡಿಯೊ
ಬೆಳ್ವಾಯಿ-574213 (08258)-276177 (O)
ಮೂಡಬಿದ್ರಿ, ಲಾವಂತ ಕಾಂಪ್ಲೆಕ್ಸ್ 9901995655
ಎಡಪದವು - 574 164 (0824)-2256374 (O) ಮಂಗಳೂರು, ದ.ಕ.
ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು



ಶ್ರೀಮತಿ ಮತ್ತು ಶ್ರೀ ಉದಯಚಂದ್ರ ರಾವ್ ನಂದಳಿಕೆ
ಯಲೆಸ್ಟೀ ಎಂಟರ್‌ಪ್ರೈಸೆಸ್
ಶಾಂಭವಿ ಹೈಟ್ಸ್, ಸೈಂಟ್‌ಮೇರಿಸ್ ಕಾಲೇಜು ಎದುರು, ಮುಖ್ಯರಸ್ತೆ, ಶಿರ್ವ - 574 116.
ಇ-ಮೇಲ್ : udayarao42@gmail.com
Z Gift Item Z Stationary Z Xerox Z Lamination
Z Spiral Binding Z Mobile & DTC Recharge Z Tours & Travels
Z Courier Service Z Sports Items & Toys Z Ice Creams

# ಕೇದಗೆ ಹರ್ಷ ಫಾರ್ಮ್ಸ್‌ನಲ್ಲಿ ವನಮಹೋತ್ಸವ



ಲಯನ್ಸ್ ಮತ್ತು ಲಯನೆಸ್ ಕ್ಲಬ್ ಮಂಗಳೂರು, ಬಂಟ್ವಾಳ ಮತ್ತು ಲೊರೆಟ್ಟೊ ಪದವು ಲಯನ್ಸ್ ಕ್ಲಬ್‌ನ ಸಹಯೋಗದಲ್ಲಿ ಬಂಟ್ವಾಳದ ಕೇದಗೆ ಹರ್ಷ ಫಾರ್ಮ್ಸ್‌ನಲ್ಲಿ ವನಮಹೋತ್ಸವ, ವನವಿಹಾರ ಕಾರ್ಯಕ್ರಮಗಳು ನೆರವೇರಿದವು. ಈ ಕಾರ್ಯಕ್ರಮದಲ್ಲಿ ಕರ್ನಾಟಕ ಸರಕಾರದ ಅರಣ್ಯ ಹಾಗೂ ಪರಿಸರ ಸಚಿವ ಶ್ರೀ ಬಿ. ರಮಾನಾಥ ರೈಯವರು ಆಗಮಿಸಿ, ಗಿಡವೊಂದನ್ನು ನೆಟ್ಟು ವನಮಹೋತ್ಸವವನ್ನು ಉದ್ಘಾಟಿಸಿದರು. ಸುಂದರ ಫಾರ್ಮ್ ಹೌಸ್‌ನ್ನು ನಿರ್ಮಾಣಗೊಳಿಸಿ, ಪರಿಸರಕ್ಕೆ ಕೊಡುಗೆ ನೀಡಿದ ಹರ್ಷಕುಮಾರ್ ಕೇದಗೆ ಹಾಗೂ ಕನಕವಲ್ಲಿ ದಂಪತಿಗಳನ್ನು ಅವರು ಸನ್ಮಾನಿಸಿದರು. ಸಭಾಕಾರ್ಯಕ್ರಮದಲ್ಲಿ ಹಾಗೂ ಸದಸ್ಯರಿಗೆ ನಡೆಸಿದ ಆಟೋಟ ಕಾರ್ಯಕ್ರಮಗಳನ್ನು ಶ್ರೀ ಪ್ರಮೋದ್ ಹಾಗೂ ಪ್ರೀತಿಕಾ ಹರ್ಷಕುಮಾರ್‌ರವರು ನಿರ್ವಹಿಸಿದರು.

# ಶ್ರೀ ಸಭಾದಲ್ಲಿ "ಉಪಾಕರ್ಮ"




ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ತಾ.17-08-2016ರಂದು ಉಪಾಕರ್ಮ ನಡೆಯಿತು. ಬೆಳಿಗ್ಗೆ 6 ಗಂಟೆಗೆ ಶ್ರೀ ಜಗದೀಶ ಉಪಾಧ್ಯಾಯರು ಗಾಯತ್ರಿ ಹೋಮ ನಡೆಸಿದರು. ಶ್ರೀ ಸಭಾದ ಪದಾಧಿಕಾರಿಗಳು ಸೇರಿದಂತೆ ಸುಮಾರು 80ಕ್ಕೂ ಹೆಚ್ಚು ಸಮಾಜ ಬಾಂಧವರು ಭಾಗವಹಿಸಿದ್ದರು.

# ಮೂಡುಬಿದಿರೆಯ ಪ್ರತಿಭಾನ್ವಿತ ವಿದ್ಯಾರ್ಥಿಗಳು

ತಾ.24-7-2016ರಂದು ಶ್ರೀ ಆದಿಶಂಕರ ಸ್ಥಾನಿಕ ಬ್ರಾಹ್ಮಣ ಪರಿಷತ್ತು (ರಿ.), ಮೂಡುಬಿದಿರೆ ಇದರ ಮಹಾಸಭೆಯ ಸಂದರ್ಭದಲ್ಲಿ 2015-16ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ.85ಕ್ಕಿಂತ ಹೆಚ್ಚು ಅಂಕ ಗಳಿಸಿದ ಪ್ರತಿಭಾ ವಿದ್ಯಾರ್ಥಿಗಳನ್ನು ಪರಿಷತ್ತಿನ ಕಾರ್ಯಾಧ್ಯಕ್ಷ ಶ್ರೀ ಬಿ. ಚಂದ್ರಶೇಖರ ರಾಯರು ನಗದು ಫಲವಸ್ತು ಸ್ಮರಣಿಕೆಗಳನ್ನು ನೀಡಿ ಗೌರವಿಸಿದರು. ಈ ಪ್ರತಿಭಾ ಪುರಸ್ಕಾರಗಳ ಪ್ರಾಯೋಜಕತ್ವವನ್ನು ಶ್ರೀ ಕುಮಾರ ಸ್ವಾಮಿ ವಿಶಾಲನಗರ, ಮಾರ್ಪಳ್ಳಿ ಶ್ರೀಮತಿ ಸತ್ಯಭಾಮ, ಗೋಪಾಲಕೃಷ್ಣನವರ ಮಕ್ಕಳು, ಶ್ರೀ ದೇವಾನಂದ ಭಟ್ ಬೆಳ್ವಾಯಿ, ಬೊಕ್ಕಸ ಸರಸ್ವತಿ ಅಮ್ಮನವರ ಮಕ್ಕಳು ವಹಿಸಿಕೊಂಡಿದ್ದರು.



1. **ಕು| ಮೇಘನಾ :** ಈಕೆಯು ಈ ಬಾರಿಯ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ.89.12 ಅಂಕಗಳಿಸಿ ಸಮಾಜಕ್ಕೆ ಕೀರ್ತಿ ತಂದಿರುತ್ತಾಳೆ. ಈಕೆಯು ಜೈನ ಪ್ರೌಢಶಾಲೆ ಮೂಡುಬಿದಿರೆಯಲ್ಲಿ ವ್ಯಾಸಂಗ ಮಾಡುತ್ತಿದ್ದು, ಶ್ರೀ ಬಿ.ಗಣೇಶ ರಾವ್ ಮೂಡುಬಿದ್ರಿ ಹಾಗೂ ಶ್ರೀಮತಿ ಮಲ್ಲಿಕ ದಂಪತಿಗಳ ಪುತ್ರಿಯಾಗಿರುತ್ತಾಳೆ. ನೃತ್ಯ, ಸಂಗೀತ ಮೊದಲಾದ ಪಾಠ್ಯೇತರ ಚಟುವಟಿಕೆಗಳಲ್ಲೂ ಪ್ರತಿಭಾನ್ವಿತಳಾಗಿದ್ದಾಳೆ.



2. **ಚಿ| ರಾಹುಲ್ :** ಈತನು ಈ ಬಾರಿಯ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ.88.50 ಅಂಕಗಳಿಸಿ ಸಮಾಜಕ್ಕೆ ಕೀರ್ತಿ ತಂದಿರುತ್ತಾನೆ. ಈತನು ಸಂತ ಥೋಮಸ್ ಇಂಗ್ಲೀಷ್ ಆಂಗ್ಲ ಭಾಷಾ ಪ್ರೌಢಶಾಲೆ ಅಲಂಗಾರಿನಲ್ಲಿ ವ್ಯಾಸಂಗ ಮಾಡುತ್ತಿದ್ದು, ಪುತ್ತಿಗೆ ಬಿ.ಸದಾಶಿವ ರಾವ್ ಹಾಗೂ ಶ್ರೀಮತಿ ಪ್ರೀತಿ ದಂಪತಿಗಳ ಪುತ್ರನಾಗಿರುತ್ತಾನೆ.



3. **ಕು| ಶುಭಾಂಜನಾ :** ಈಕೆಯು ಈ ಬಾರಿಯ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ.87.54 ಅಂಕಗಳಿಸಿ, ಸಮಾಜಕ್ಕೆ ಕೀರ್ತಿ ತಂದಿರುತ್ತಾಳೆ. ಈಕೆಯು ಸಂತ ಥೋಮಸ್ ಆಂಗ್ಲ ಭಾಷಾ ಪ್ರೌಢಶಾಲೆ ಅಲಂಗಾರಿನಲ್ಲಿ ವ್ಯಾಸಂಗ ಮಾಡುತ್ತಿದ್ದು, ಶ್ರೀ ದೇವಾನಂದ ಭಟ್ ಬೆಳ್ವಾಯಿ ಹಾಗೂ ಶ್ರೀಮತಿ ವೀಣಾರವರ ಪುತ್ರಿಯಾಗಿರುತ್ತಾಳೆ. ಈಕೆ ನೃತ್ಯ, ಸಂಗೀತ, ಭಾಗವತಿಕೆ, ಯಕ್ಷಗಾನ ಮೊದಲಾದ ಪಾಠ್ಯೇತರ ಚಟುವಟಿಕೆಗಳಲ್ಲೂ ಪ್ರತಿಭಾನ್ವಿತಳಾಗಿದ್ದಾಳೆ.


## ಶ್ರೀ ವೈಷ್ಣವಿ ಜ್ಯೋತಿಷ್ಯಾಲಯ

ನಮ್ಮಲ್ಲಿ ಜಾತಕಗಳನ್ನು ಮಾಡಿ ಕೊಡಲಾಗುವುದು.
ಹಾಗೂ ತತ್ಸಂಬಂಧ ಶಾಂತಿ ಹೋಮಾದಿಗಳನ್ನು ಮತ್ತು ಶುಭ ಕಾರ್ಯಕ್ರಮಗಳನ್ನು
ನಮ್ಮಲ್ಲಿಯೇ ವ್ಯವಸ್ಥಿತವಾಗಿ ಮಾಡಿಕೊಡಲಾಗುವುದು.

**ವೇದಮೂರ್ತಿ ಚಿದಾನಂದ ಭಟ್**

| | |
|---|---|
| #1437, 5ನೇ ಮುಖ್ಯ ರಸ್ತೆ, 2ನೇ "ಡಿ" ಬ್ಲಾಕ್, 2ನೇ ಸ್ಟೇಜ್, ರಾಜಾಜಿನಗರ, ಬೆಂಗಳೂರು-560010 | ಶ್ರೀ ಅಗಸ್ತ್ಯೇಶ್ವರ ದೇವಸ್ಥಾವದ ಬಳಿ, ಕಿರಿಮಂಜೇಶ್ವರ, ಕುಂದಾಪುರ ತಾಲೂಕು, ಉಡುಪಿ ಜಿಲ್ಲೆ |

**ಮೊಬೈಲ್- 9886629697, 9986119865**



ಶ್ರೀ ಕ್ಷೇತ್ರ ಉದಯಾದ್ರಿ

## ಶ್ರೀ ಬಾಲಗಣಪತಿ ಪ್ರಸನ್ನ ಪಾರ್ವತಿ ದೇವಸ್ಥಾನ

**ಪಡುಬಿದ್ರಿ, ಉಡುಪಿ ಜಿಲ್ಲೆ-574 111.**

ಭಕ್ತಾಭಿಮಾನಿಗಳೇ,

ಸ್ವಸ್ತಿ! ಶ್ರೀ ದುರ್ಮುಖ ನಾಮ ಸಂವತ್ಸರದ ಕನ್ಯಾಮಾಸ ೨೩. ಸಲುವ ಆಶ್ವೀಜ ಶುದ್ಧ ೮ಯು
ತಾ.09-10-2016ನೇ ರವಿವಾರದಂದು

**ಶ್ರೀ ಕ್ಷೇತ್ರದಲ್ಲಿ ವರ್ಷಂಪ್ರತಿಯಂತೆ ಶರನ್ನವರಾತ್ರಿಯ ಪ್ರಯುಕ್ತ**

## ಶ್ರೀ ಚಂಡಿಕಾಯಾಗವು

ಜರಗಲಿರುವುದು.
ಮಧ್ಯಾಹ್ನ ಗಂಟೆ 11-30ಕ್ಕೆ ಪೂರ್ಣಾಹುತಿಯೊಂದಿಗೆ ಸಂಪನ್ನಗೊಂಡು
ಸಾರ್ವಜನಿಕ ಅನ್ನಸಂತರ್ಪಣೆ ಜರಗಲಿರುವುದು.
ಸಮಾಜ ಬಾಂಧವರು ಇದನ್ನೇ ವೈಯಕ್ತಿಕ ಆಮಂತ್ರಣವೆಂದು ಸ್ವೀಕರಿಸಿ,
ಈ ದೇವತಾ ಕಾರ್ಯದಲ್ಲಿ ಭಾಗವಹಿಸಿ, ಪ್ರಸಾದವನ್ನು ಸ್ವೀಕರಿಸಿ, ತನು-ಮನ-ಧನ ಸಹಾಯವನ್ನಿತ್ತು
ಶ್ರೀದೇವಿಯ ಕೃಪೆಗೆ ಪಾತ್ರರಾಗಬೇಕಾಗಿ ವಿನಂತಿಸುತ್ತೇವೆ.

**-ಆಡಳಿತ ಮಂಡಳಿ**
ಉದಯಾದ್ರಿ ಶ್ರೀ ಬಾಲಗಣಪತಿ ಪ್ರಸನ್ನ ಪಾರ್ವತಿ ದೇವಸ್ಥಾನ, ಪಡುಬಿದ್ರಿ.

**ಈ ಸೇವೆಯಲ್ಲಿ ಭಾಗವಹಿಸುವ ಭಕ್ತಾದಿಗಳು ರೂ.200/-ನ್ನು ಪಾವತಿಸಿ ರಶೀದಿಯನ್ನು ಪಡೆಯತಕ್ಕದ್ದು. ಪೂರ್ಣಾಹುತಿಗೆ ಬೇಕಾದ ತುಪ್ಪ, ತೆಂಗಿನಕಾಯಿ, ಬಾಳೆಹಣ್ಣು, ಅಡಿಕೆ, ವೀಳ್ಯದೆಲೆ, ಪುಷ್ಪ ಇತ್ಯಾದಿಗಳನ್ನು ನೀಡಬಹುದು.**

**ತಾ.01-102016ರಿಂದ 11-10-2016ರ ವರೆಗೆ ಪ್ರತಿದಿನ ಸಾಯಂಕಾಲ 7-30ಕ್ಕೆ ಶರನ್ನವರಾತ್ರಿಯ ಪ್ರಯುಕ್ತ ವಿಶೇಷ ಪೂಜೆ ನಡೆಯಲಿರುವುದು.**

**ಪೂಜಾ ಸೇವೆಯ ಬಾಬ್ತು ರೂಪಾಯಿ 300/-**

(ಶನಿಪೂಜೆ, ಸತ್ಯನಾರಾಯಣ ಪೂಜೆ ಭಕ್ತರ ಅಪೇಕ್ಷೆತಕ್ಕಂತೆ ಸಂಧಿ ಶಾಂತಿ ಹೋಮಗಳನ್ನು ನಡೆಸಲಾಗುತ್ತದೆ)
ಪ್ರತಿ ತಿಂಗಳು ರಾತ್ರಿ 7-30ಕ್ಕೆ ಸಂಕಷ್ಟಿ ಚತುರ್ಥಿ ಪೂಜೆ ನಡೆಯುತ್ತದೆ.
**ದೇವರ ದರ್ಶನ : ಬೆಳಿಗ್ಗೆ 6-00ರಿಂದ ಮಧ್ಯಾಹ್ನ 12-30ರ ವರೆಗೆ ; ಸಂಜೆ 4-00ರಿಂದ ರಾತ್ರಿ 8-00ರ ವರೆಗೆ**


# ಪಡುಬಿದ್ರಿ ಬಾಲಗಣಪತಿ ದೇಗುಲದಲ್ಲಿ ವೇದ ಪಾರಾಯಣ ಸೇವೆ



ಶ್ರೀ ಕ್ಷೇತ್ರ ಉದಯಾದ್ರಿಯಲ್ಲಿ ಸ್ವಾಧ್ಯಾಯ ಅನುಷ್ಠಾನ ಮಂಡಲಿ, ಪಡುಬಿದ್ರಿ ಇದರ ವತಿಯಿಂದ ಗೌರೀ ತೃತೀಯದಂದು ಋಕ್‌ಸಂಹಿತಾ ಪಾರಾಯಣವು ನಡೆಯಿತು. ಮಂಡಲದ ಸಂಚಾಲಕ ಶ್ರೀ ಎಮ್.ರಾಜಶೇಖರ ರಾವ್ ಇವರ ನೇತೃತ್ವದಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ದೇಗುಲದ ತಂತ್ರಿಗಳಾದ ಬ್ರಹ್ಮಶ್ರೀ ಪಾವಂಜೆ ವಾಗೀಶ ಶಾಸ್ತ್ರಿ, ಹೆಜಮಾಡಿ ಕೃಷ್ಣ ರಾಜ ಭಟ್, ಪಾವಂಜೆ ಜಗದೀಶ ಉಪಾಧ್ಯಾಯ, ಸಾಂತೂರು ಸದಾಶಿವ ರಾವ್, ನಾಗರಾಜ ರಾವ್, ಪ್ರತಾಪ್ ರಾವ್, ಅರವಿಂದ ಶರ್ಮ ಇವರುಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಇದೇ ಕಾರ್ಯಕ್ರಮವು ಆಗಸ್ಟ್ 28ರಂದು ಪಾದೆಬೆಟ್ಟು ಶ್ರೀ ವಿಷ್ಣುಮೂರ್ತಿ ದೇಗುಲ ದಲ್ಲಿಯೂ ನಡೆಯಿತು. ಅಲ್ಲಿ ಶ್ರೀ ಜಗದಾಭಿ ರಾಮಸ್ವಾಮಿ, ಶ್ರೀ ಸುದರ್ಶನ್ ಪ್ರಸಾದ್, ಶ್ರೀ ಪಿ.ಡಿ.ಶೇಖರ್‌ರಾವ್ ಮತ್ತಿತರರು ಉಪಸ್ಥಿತರಿದ್ದರು.

# YOU ARE MY WONDERFUL MOTHER

You had me in you and took my care
I gave you pain which you had to bear
And then came my first cry
To make it the last, that was always your try

You loved me, you cared for me
You were always there for me
You ate after I ate
You slept after I slept

I made you run, miles and miles
I had become naughty, but you had smiles
On your face was that cheerful glow
Which inspired me to grow

You were always there for me when I was in trouble
With a smile on your face, lovable !
You guided me, what's good and bad
To be happy, never to be sad

You are my princess, my angel, my world
I don't want others, you are my world
I want your love, that will be my bliss
Don't know how to thank you for all of this....

**You are my wonderful MOTHER**

**- K. Shreya Rao, Kukkikatte**

# ಜಗದ್ಗುರುಗಳ ಚಾತುರ್ಮಾಸ್ಯ ವೃತ ಪ್ರಯುಕ್ತ ಶ್ರೀ ಸುಬ್ರಹ್ಮಣ್ಯ ಸಭಾದಿಂದ ಶೃಂಗೇರಿಯಾತ್ರೆ

**ತದ್ವಿದ್ಧಿ ಪ್ರಣಿಪಾತೇನ ಪರಿಪ್ರಶ್ನೇನ ಸೇವೆಯಾ ।**
**ಉಪದೇಕ್ಷ್ಯಂತಿ ತೇ ಜ್ಞಾನಂ ಜ್ಞಾನಿನಸ್ತತ್ತ್ವದರ್ಶಿನಃ ॥**



ದಿನಾಂಕ 27-08-2016ನೇ ಶನಿವಾರ ಬೆಳಿಗ್ಗೆ 6-15ಕ್ಕೆ ಸರಿಯಾಗಿ ಸುಬ್ರಹ್ಮಣ್ಯ ಸಭಾ ವತಿಯಿಂದ ಸುಮಾರು 32 ಜನ ಸಮಾಜ ಬಾಂಧವರು ಶೃಂಗೇರಿ ಯಾತ್ರೆಗೆ ಶ್ರೀ ಮೂಕಾಂಬಿಕಾ ಬಸ್ಸಿನಲ್ಲಿ ಹೊರಟೆವು. 7.15ಕ್ಕೆ ನಮ್ಮವರೇ ಆದ ನಂದಿಕೂರು ಶ್ರೀ ಜನಾರ್ದನರಾವ್ ಇವರ ಮನೆಯಲ್ಲಿ ಶ್ರೀ ಸುಬ್ರಹ್ಮಣ್ಯ ಸಭಾ ವತಿಯಿಂದ ತಯಾರಿಸಿದ್ದ ಇಡ್ಲಿ, ಸಾಂಬಾರ್, ಚಟ್ನಿ, ಉಪ್ಪಿನಕಾಯಿ, ಶೀರ ಮುಂತಾದ ತಿಂಡಿಗಳನ್ನು ಪೊಗದಸ್ತಾಗಿ ತಿಂದು ಕಾಫಿ, ಚಹಾ ಕುಡಿದು ಶ್ರೀ ಜನಾರ್ದನ ರಾವ್ ಮನೆಯವರಿಗೆ ಸ್ಥಳಾವಕಾಶ ಒದಗಿಸಿ ಕೊಟ್ಟದ್ದಕ್ಕೆ ವಂದನೆ ಸಲ್ಲಿಸುತ್ತಾ ಶೃಂಗೇರಿಯ ಶ್ರೀ ಶಾರದಾಂಬೆಯ ದರ್ಶನಕ್ಕೆ ಪ್ರಯಾಣ ಬೆಳೆಸಿದೆವು. 10-15ಕ್ಕೆ ಸರಿಯಾಗಿ ಶೃಂಗೇರಿ ದೇವಸ್ಥಾನ ತಲುಪಿದೆವು. ಮೊದಲೇ ಗೊತ್ತು ಪಡಿಸಿದ ಕೊಠಡಿಗಳಲ್ಲಿ ವಿಶ್ರಾಂತಿ ಪಡೆದು ಶ್ರೀ ಶಾರದಾಂಬೆಯ ದರುಶನ ಪಡೆಯಲು ಹೊರಟೆವು. ಸರತಿಯ ಸಾಲಲ್ಲಿ ಅವರವರ ಶಕ್ತ್ಯಾನುಸಾರ ಪೂಜಾ ರಶೀದಿಗಳನ್ನು ಪಡೆದುಕೊಂಡು ಪೂಜೆಯನ್ನು ಸಲ್ಲಿಸಿ ಶ್ರೀ ಶಾರದಾಂಬೆಯನ್ನು ಕಣ್ತುಂಬ ನೋಡಿ ಪ್ರಸಾದ ಸ್ವೀಕರಿಸಿ ದೇವಾಲಯದ ಆವರಣದಲ್ಲಿರುವ ಶ್ರೀ ಶಂಕರಾಚಾರ್ಯ, ತೋರಣ ಗಣಪತಿ, ವಿದ್ಯಾಶಂಕರ ದೇವಾಲಯದ ದರ್ಶನ ಮಾಡಿ ಸಂತಸಪಟ್ಟೆವು. ಕೆಲವರು ತುಂಗಾ ನದಿಯ ನೀರಲ್ಲಿ ಇಳಿದು ನೀರನ್ನು ಸಂಪ್ರೋಕ್ಷಣೆ ಮಾಡಿ ಪುನೀತರಾದರು.

ತದನಂತರ ಜಗದ್ಗುರುಗಳ ದರ್ಶನಕ್ಕೆ ಹಾಗೂ ಪಾದಪೂಜೆ, ಗುರುಕಾಣಿಕೆ ಸಲ್ಲಿಸಲು ತವಕದಿಂದ ಸಾಗಿದೆವು. ಅಲ್ಲಿ ಶ್ರೀ ಕರುಣಾಕರ ಬೆಳ್ಳೆ ಹಾಗೂ ಶ್ರೀ ಶ್ರೀಕಾಂತ್ ಇವರ ಮಾರ್ಗದರ್ಶನದಲ್ಲಿ ಗುರುಕಾಣಿಕೆ ಪಡೆದುಕೊಂಡು ಶ್ರೀ ಜಗದ್ಗುರುಗಳ ಪಾದಕ್ಕೆ ಸಮರ್ಪಿಸಿದೆವು. ಬೇರೆ ಬೇರೆ ಊರುಗಳಿಂದ ಬಂದ ಹಲವಾರು ಸಮಾಜ ಬಾಂಧವರು ನಮ್ಮ ಜೊತೆಗೂಡಿದರು. ವಿವಿಧ ಸ್ಥಾನಿಕ ಬ್ರಾಹ್ಮಣ ಸಂಘದ ಅಧ್ಯಕ್ಷರುಗಳಿಗೆ ಫಲ ಮಂತ್ರಾಕ್ಷತೆಯನ್ನು ನೀಡಿ ಸಮಾಜ ಬಾಂಧವರನ್ನು ಉದ್ದೇಶಿಸಿ ಆಶೀರ್ವಚನ ಮಾತುಗಳನ್ನಾಡಿದರು. ಗುರುಭವನದಲ್ಲಿ ಸೇರಿದವರೆಲ್ಲರೂ ಸರತಿಯ ಸಾಲಲ್ಲಿ ನಿಂತು ಫಲ ಮಂತ್ರಾಕ್ಷತೆ ಪಡೆದು ಧನ್ಯರಾದರು. ಶ್ರೀ ಮಠದ ವತಿಯಿಂದ ಮಹಿಳೆಯರಿಗೆ ಪ್ರಸಾದ ರೂಪವಾಗಿ ಸೀರೆಯನ್ನು ವಿತರಿಸಲಾಯಿತು.ನಂತರ ಪ್ರಸಾದ ಭೋಜನವನ್ನು ಎಲ್ಲರೂ ಸ್ವೀಕರಿಸಿದೆವು. ಊಟದ ವ್ಯವಸ್ಥೆ ಅಚ್ಚುಕಟ್ಟಾಗಿತ್ತು. ಸಂಜೆ 3.45ಕ್ಕೆ ನಮ್ಮ ಬಸ್ಸು ಜಯಕಾರದೊಂದಿಗೆ ಮಂಗಳೂರಿಗೆ ಹೊರಟಿತು. ಶ್ರೀ ಸಭಾದ ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆ ಗುರುಗಳ ಪಾದಪೂಜೆಯ ಪ್ರಸಾದವನ್ನು ನಗು ಮುಖದಿಂದ ಎಲ್ಲರಿಗೂ ಹಂಚಿದರು.

ಸದನದ ಕೋಶಾಧಿಕಾರಿಗಳಾದ ಶ್ರೀ ಪಿ.ಶ್ರೀಕಾಂತ್ ರಾವ್ ಇವರ ನೇತೃತ್ವದಲ್ಲಿ ಸಮಾಜ ಬಾಂಧವರು ಅವರವರ ಸ್ವಪರಿಚಯ ಹಾಗೂ ಹಾಡುಗಳನ್ನು ಹಾಡುತ್ತಾ, ಕುಣಿದಾಡುತ್ತಾ ಸಂತೋಷಪಟ್ಟೆವು. ಸಂಜೆ 7.00 ಗಂಟೆಗೆ ಶ್ರೀ ಶಾರದಾಂಬೆಯ ಹಾಗೂ ಶ್ರೀ ಜಗದ್ಗುರುಗಳ ದರ್ಶನ ಪಡೆದ ಧನ್ಯತಾ ಭಾವದೊಂದಿಗೆ ಶ್ರೀ ಸುಬ್ರಹ್ಮಣ್ಯ ಸಭಾ ಮಂಗಳೂರಿಗೆ ತಲುಪಿದೆವು.

ವರದಿ : **ಶ್ರೀಮತಿ ಪುಷ್ಪಾವತಿ ಶ್ರೀನಿವಾಸ್ ರಾವ್**

# ಬೈಲೂರು ಬಾಲಚಂದ್ರ ರಾವ್ ಇವರಿಗೆ ಸನ್ಮಾನ



ಶ್ರೀ ಅನಂತಮತಿ ಅನುದಾನಿತ ಹಿರಿಯ ಪ್ರಾಥಮಿಕ ಶಾಲೆ, ಹೆಕ್ಕಡ್ಕ ಇಲ್ಲಿಯ ವಿದ್ಯಾರ್ಥಿಗಳಿಗೆ ಕಳೆದ 3 ವರ್ಷಗಳಿಂದ ನೋಟ್ ಪುಸ್ತಕಗಳನ್ನು ನೀಡುತ್ತಿರುವ ಜಲಲಕ್ಷ್ಮೀ ಟ್ರಸ್ಟ್‌ನ ಅಧ್ಯಕ್ಷರಾದ ಬೈಲೂರು ಬಾಲಚಂದ್ರ ರಾವ್ ಇವರನ್ನು ಶಾಲಾ ವತಿಯಿಂದ ಶಾಲು ಹೊದಿಸಿ, ಫಲ, ಸ್ಮರಣಿಕೆಗಳನ್ನು ಕೊಟ್ಟು ಸನ್ಮಾನಿಸಲಾಯಿತು. ಈ ಸಮಾರಂಭದಲ್ಲಿ ಶಾಲಾ ಸಂಚಾಲಕ ಹೆಚ್.ರತ್ನಾಕರ ನಾಯ್ಕ್, ಶಿಕ್ಷಣ ತಜ್ಞ ಕೆ. ಅನಂತ ಪಟ್ಟಾಭಿರಾವ್, ಶಾಲಾ ಮುಖ್ಯಸ್ಥ ಪ್ರಕಾಶ್ ಜೈನ್ ಹಾಗೂ ಇತರ ಗಣ್ಯ ವ್ಯಕ್ತಿಗಳು ಉಪಸ್ಥಿತರಿದ್ದರು.

**-ಕೆ. ಅನಂತಪಟ್ಟಾಭಿರಾವ್**

# ಶ್ರೀ ಜಿ.ಕೆ. ಕೋಲ್ವೆಯವರಿಗೆ ಸನ್ಮಾನ





ಸ್ಥಾನಿಕ ಮಹಾಮಂಡಲದ ಕೋಶಾಧಿಕಾರಿ ಹಾಗೂ ನಮ್ಮ ಶಾರದಾ ವೇದಿಕೆಯ ಮಹಾಪೋಷಕರಾದ ಶ್ರೀ ಗೋಪಾಲಕೃಷ್ಣ ಕೋಲ್ವೆ (ಜಿ.ಕೆ.ಕೋಲ್ವೆ)ಯವರು ಕೆನರಾ ಬ್ಯಾಂಕ್ ನಿವೃತ್ತ ಅಧಿಕಾರಿಗಳ ಸಂಘದ ಸದಸ್ಯರಾಗಿದ್ದು, ಅವರನ್ನು ತಾ.23-07-2016ರಂದು ಕೊಯಮುತ್ತೂರು ನಗರದಲ್ಲಿ ನಡೆದ ಸಂಘದ 10ನೇ ದ್ವೈವಾರ್ಷಿಕ ಸಮ್ಮೇಳನದಲ್ಲಿ, ''ವಯಸ್ಸು 75 ದಾಟಿದ ನಿವೃತ್ತ ಹಿರಿಯ ಅಧಿಕಾರಿಗಳನ್ನು ಗೌರವಿಸುವ'' ಕಾರ್ಯಕ್ರಮದನ್ವಯ ಶ್ರೀ ಕೋಲ್ವೆಯವರ ಸುಮಾರು ನಾಲ್ಕು ದಶಕಗಳ ಸಾರ್ಥಕ ಬ್ಯಾಂಕ್ ಸೇವೆಯನ್ನು ನೆನಪಿಸಿ ಬ್ಯಾಂಕಿನ ಜನರಲ್ ಮೆನೇಜರ್ ಶ್ರೀ ಗಿರಿಯವರ ಮುಖಾಂತರ ಗೌರವಿಸಲಾಯಿತು.

# ಬಾರ್ಕೂರಿನಲ್ಲಿ ನಾಗರಪಂಚಮಿ



ಬಾರಕೂರು ಧರ್ಮಶಾಲೆ ಶ್ರೀ ಮಾಸ್ತಿಅಮ್ಮನವರ ದೇವಸ್ಥಾನದ ನಾಗಸನ್ನಿಧಿಯಲ್ಲಿ ವಿಜೃಂಭಣೆಯಿಂದ ನಾಗರಪಂಚಮಿ ಉತ್ಸವ ಜರಗಿತು. ಪಂಚಾಮೃತಾಭಿಷೇಕ ಮುನ್ನೂರಕ್ಕೂ ಮಿಕ್ಕಿ ಎಳನೀರು ಅಭಿಷೇಕ, ವಿವಿಧ ಸೂಕ್ತಾಭಿಷೇಕ, ಅಲಂಕಾರ ಪೂಜೆಗಳು ತಂತ್ರಿಗಳಾದ ಉಮೇಶ ಬಾಯರಿ ಹಾಗೂ ಅರ್ಚಕರಾದ ಅನಂತಪದ್ಮನಾಭ ಭಟ್ ನೇತೃತ್ವದಲ್ಲಿ ನೂರಾರು ಭಕ್ತಾದಿಗಳ ಸಮ್ಮುಖದಲ್ಲಿ ಜರಗಿತು.

# ಅವನೀಂದ್ರನಾಥ್ ರಾವ್ ಅವರಿಗೆ ''ತುಳುವ ಐಸಿರಿ'' ಪುರಸ್ಕಾರ



ಟೈಮ್ಸ್ ಆಫ್ ಕುಡ್ಲ ಪತ್ರಿಕೆ ಮತ್ತು ತುಳು ಸಮ್ಮೇಳನ ಸಮಿತಿ, ಮುಲ್ಕಿ ಈಚೆಗೆ ಆಯೋಜಿಸಿದ ತುಳು ಸಮ್ಮೇಳನದಲ್ಲಿ ಕೇಂದ್ರ ಸಂಸ್ಕೃತಿ ಸಚಿವಾಲಯದ ಅಧಿಕಾರಿ ಡಾ. ವೈ. ಅವನೀಂದ್ರನಾಥ್ ರಾವ್ ಅವರಿಗೆ ''ತುಳುವ ಐಸಿರಿ'' ಸಾಧಕ ಪುರಸ್ಕಾರ ನೀಡಿ ಗೌರವಿಸಲಾಗಿದೆ. ಅವನೀಂದ್ರನಾಥ್ ಅವರು ದೆಹಲಿ ತುಳುಸಿರಿಯ ಸ್ಥಾಪಕ ಅಧ್ಯಕ್ಷರಾಗಿ ಮತ್ತು ದೆಹಲಿ ಕರ್ನಾಟಕ ಸಂಘದ ಕೋಶಾಧಿಕಾರಿಯಾಗಿ ಸೇವೆ ಸಲ್ಲಿಸಿದ್ದಾರೆ.

ಬಪ್ಪನಾಡು ಶ್ರೀ ದುರ್ಗಾ ಪರಮೇಶ್ವರಿ ದೇವಸ್ಥಾನದ ಪ್ರಾಂಗಣದಲ್ಲಿ ಜರಗಿದ ''ತುಳು ಐಸಿರಿದ ಐಸ್ರ'' ಎಂಬ ಎರಡು ದಿನಗಳ ಸಮಾವೇಶವನ್ನು ಧರ್ಮಾಧಿಕಾರಿ ಡಾ. ವೀರೇಂದ್ರ ಹೆಗ್ಗಡೆ ಅವರು ಉದ್ಘಾಟಿಸಿದ್ದರು.

ಮುಂಬೈಯ ಹಿರಿಯ ಸಾಹಿತಿ ಡಾ. ಸುನೀತಾ ಶೆಟ್ಟಿ, ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಅಧ್ಯಕ್ಷೆ ಡಾ. ಜಾನಕೀ ಬ್ರಹ್ಮಾವರ, ಅಖಿಲ ಭಾರತ ತುಳು ಒಕ್ಕೂಟದ ಅಧ್ಯಕ್ಷ ಧರ್ಮಪಾಲ್ ದೇವಾಡಿಗ, ಡಾ. ವೈ. ಎನ್.ಶೆಟ್ಟಿ, ಚಂದ್ರಶೇಖರ ಸುವರ್ಣ, ಶಶಿ ರೈ, ಎಸ್. ಆರ್.ಬಂಡಿಮಾರ್,ವಸಂತ ಶೆಟ್ಟಿ ಬೆಳ್ಳಾರೆ ಮೊದಲಾದ ಗಣ್ಯರು ಉಪಸ್ಥಿತರಿದ್ದರು.

# ಬಿ.ಜೆ.ಪಿ. ಉಡುಪಿ ಜಿಲ್ಲಾ ರೈತ ಮೋರ್ಚಾದ ಪ್ರಧಾನ ಕಾರ್ಯದರ್ಶಿಯಾಗಿ ಶ್ರೀನಿವಾಸ ಶರ್ಮರು ಆಯ್ಕೆ




ಪಾದೆಬೆಟ್ಟು ಗ್ರಾಮದ ದಿ। ರಾಮಶರ್ಮರ ಮಗನಾದ ಶ್ರೀನಿವಾಸ ಶರ್ಮರವರು ಭಾರತೀಯ ಜನತಾ ಪಕ್ಷದ ಉಡುಪಿ ಜಿಲ್ಲಾ ರೈತ ಮೋರ್ಚಾದ ಪ್ರಧಾನ ಕಾರ್ಯದರ್ಶಿಯಾಗಿ ಜಿಲ್ಲಾ ಬಿಜೆಪಿ ಅಧ್ಯಕ್ಷರಾದ ಮಟ್ಟಾರು ರತ್ನಾಕರ ಹೆಗ್ಡೆಯವರು ನೇಮಕ ಮಾಡಿದ್ದಾರೆ.

ಶ್ರೀಯುತರು ಈ ಹಿಂದೆ ಕಾಪು ಕ್ಷೇತ್ರದ ಬಿಜೆಪಿಯ ಖಜಾಂಚಿ ಹಾಗೂ ಉಪಾಧ್ಯಕ್ಷರಾಗಿಯೂ ಸೇವೆ ಸಲ್ಲಿಸಿರುತ್ತಾರೆ. ಇವರು ಪಡುಬಿದ್ರಿ ಗ್ರಾಮ ಪಂಚಾಯತಿನಲ್ಲಿ ಸತತ 4 ಅವಧಿಯಲ್ಲಿ ಪಂಚಾಯತ್ ಸದಸ್ಯರಾಗಿಯೂ, 2005ರಲ್ಲಿ ಪಂಚಾಯತಿನ ಉಪಾಧ್ಯಕ್ಷರಾಗಿಯೂ ಸೇವೆ ಸಲ್ಲಿಸಿರುತ್ತಾರೆ.

# ಶ್ರೀ ಶಾರದಾ ಮಂಟಪದಲ್ಲಿ ಹಬ್ಬಗಳ ಸಡಗರ


ತಾ.07-08-2016-ನಾಗರ ಪಂಚಮಿ


ತಾ.12-08-2016-ವರಮಹಾಲಕ್ಷ್ಮೀ ವ್ರತ


ತಾ.17-08-2016-ಋಗುಪಾಕರ್ಮ

ಶ್ರಾವಣ ಮಾಸ ಆರಂಭವಾದಂತೆ ಶ್ರೀ ಶಾರದಾ ಮಂಟಪದಲ್ಲಿ ಒಂದೊಂದೇ ಕಾರ್ಯಕ್ರಮಗಳು ಆರಂಭವಾಗುತ್ತಿವೆ. ಇದಕ್ಕೆ ಪೂರ್ವಭಾವಿ ಸಿದ್ದತೆಯಾಗಿ ಜುಲೈ ತಿಂಗಳಲ್ಲಿ ನಡೆದ ಮಹಾಸಭೆಯ ನಂತರ ಯುವ ವೇದಿಕೆಯ ಸದಸ್ಯರು ಶಾರದಾಮಂಟಪದ ಪರಿಸರವನ್ನು ಸ್ವಚ್ಚಗೊಳಿಸಿ ಈ ಎಲ್ಲಾ ಹಬ್ಬಗಳಿಗೆ ಮಂಟಪವನ್ನು ಹಾಗೂ ದೇವಸ್ಥಾನವನ್ನು ಅಣಿಗೊಳಿಸಿದರು. ಈ ಹಬ್ಬಗಳ ಸರಮಾಲೆ ಯಲ್ಲಿ ಮೊದಲನೆಯದಾಗಿ **ನಾಗರಪಂಚಮಿ** ಯನ್ನು **ತಾ.7-08-2016ನೇ** ರವಿವಾರ ಶ್ರದ್ಧಾಭಕ್ತಿಯಿಂದ ಆಚರಿಸಲಾಯಿತು. ಮಂಟಪದ ಆವರಣದಲ್ಲಿ ದೇವಳದ ಹಿಂದೆ ಇರುವ ನಾಗದೇವರ ಗುಡಿಯನ್ನು ತೋರಣಗಳಿಂದ ಅಲಂಕರಿಸಲಾಗಿತ್ತು. ಸಂಘದ ಅಧ್ಯಕ್ಷರು, ಉಪಾಧ್ಯಕ್ಷರುಗಳು ಕಾರ್ಯದರ್ಶಿ ಹಾಗೂ ಇತರ ಸಂಘದ ಪದಾಧಿಕಾರಿಗಳು ಹಾಜರಿದ್ದು ಸಂಘದ ವತಿಯಿಂದ ಸಮಾಜ ಬಾಂಧವರ ಶ್ರೇಯೋಭಿವೃದ್ಧಿಯನ್ನು ಪ್ರಾರ್ಥಿಸಿ ನಾಗದೇವರಿಗೆ ತನು ಸಮರ್ಪಿಸಿದರು. ಎಪ್ಪತ್ತಕ್ಕೂ ಹೆಚ್ಚು ಸಮಾಜಬಾಂಧವರು ಹಾಗೂ ಪರಿಸರದ ಭಕ್ತರು ನಾಗದೇವರಿಗೆ ಪಂಚಾಮೃತ, ಬೊಂಡಾಭಿಷೇಕ, ಕ್ಷೀರಾಭಿಷೇಕ ಇತ್ಯಾದಿ ಸೇವೆಗಳನ್ನು ಸಲ್ಲಿಸಿದರು. ಶ್ರೀ ಜಿ.ಕೆ ಕೋಲ್ಪೆ, ಶ್ರೀ ವೈ ವಿಠಲ್ ರಾವ್, ಶ್ರೀ ಮೋಹನ್ ದೇವ್, ವೈ.ಅಜಿತ್ ರಾವ್ ಇವರು ಮುತುವರ್ಜಿ ವಹಿಸಿ ಅರ್ಚಕರಿಗೆ ಸಹಕರಿಸಿದರು.


ತಾ.26-08-2016 ಸಾಮೂಹಿಕ ಹೂವಿನ ಪೂಜೆ

**ತಾ.12-08-2016ನೇ** ಶುಕ್ರವಾರ **ವರಮಹಾಲಕ್ಷ್ಮೀ ವ್ರತ**. ಆ ದಿನ ಸಂಜೆ ನಾಲ್ಕು ಗಂಟೆಗೆ ಮಹಿಳಾವೇದಿಕೆಯ ಸದಸ್ಯರೆಲ್ಲರೂ ಸೇರಿ ಶ್ರೀ ಶಾರದಾ ಮಂಟಪದಲ್ಲಿ ಪೂಜೆಗಾಗಿ ವೇದಿಕೆಯನ್ನು ಸಿದ್ದಪಡಿಸಿದ್ದರು. ಶ್ರೀ ವಸಂತರಾವ್ ಕರಂಬಳ್ಳಿ ಇವರ ಪುತ್ರಿ ಕುಮಾರಿ ವಿಜೇತಾ ಆಕರ್ಷಕವಾದ ರಂಗವಲ್ಲಿಯನ್ನು ಬಿಡಿಸಿದ್ದರು. ಶ್ರೀ ಕೆ ಸುರೇಶ್ ರಾವ್ ಹಾಗೂ ಶ್ರೀಮತಿ ನಾಗವಲ್ಲಿ ದಂಪತಿಗಳು ಪೂಜಾಕೈಂಕರ್ಯದ ಕರ್ತೃವಾಗಿ ಪೂಜಾಕಾರ್ಯಗಳನ್ನು ನೆರವೇರಿಸಿದರು, ಬ್ರಹ್ಮಶ್ರೀ ನಾಗಭೂಷಣ ಶಾಸ್ತ್ರಿ ಯವರು ಪುರೋಹಿತರಾಗಿ ಆಗಮಿಸಿದರು. ಸುಮಾರು ನೂರೈವತ್ತಕ್ಕೂ ಮಿಕ್ಕಿ ಸಮಾಜ ಭಾಂಧವರು ಹಾಗೂ ಪರಿಸರದ ಭಕ್ತರು ಮಹಿಳೆಯರು ಶ್ರೀ ವರಮಹಾಲಕ್ಷ್ಮಿ ವೃತವನ್ನು ಆಚರಿಸಿ, ಶ್ರೀ ದೇವಿಗೆ ಮಹಾಮಂಗಳಾರತಿ ಯನ್ನು ಸಲ್ಲಿಸಿ ಪ್ರಸಾದ ಸ್ವೀಕರಿಸಿದರು.

**ತಾ.17-08-2016ನೇ** ಬುಧವಾರ **ಋಗುಪಾಕರ್ಮ ವನ್ನು** ಆಚರಿಸಲಾಯಿತು. ಸೌರಮಾನ ಪದ್ಧತಿಯಂತೆ ಸಿಂಹ ಮಾಸದ ಶ್ರವಣ ನಕ್ಷತ್ರ ಇರುವ ದಿನದಂದು ಋಗುಪಾ ಕರ್ಮವನ್ನು ಆಚರಿಸಲಾಗುತ್ತದೆ. ಶ್ರೀ ಶಾರದಾ ಮಂಟಪದಲ್ಲಿ ಸುಮಾರು ಎಂಬತ್ತು ಜನ ಸಮಾಜ ಬಾಂಧವರು ಹಾಗೂ ನೂತನ ವಟುಗಳು ಈ ಕಾರ್ಯಕ್ರಮ ದಲ್ಲಿ ಭಾಗವಹಿಸಿದ್ದರು. ಅಂದು ಬೆಳಿಗ್ಗೆ ಋತ್ವಿಜರಾದ ಬ್ರಹ್ಮಶ್ರೀ ಜಗದೀಶ ಉಪಾಧ್ಯಾಯರು ಮತ್ತು ಬ್ರಹ್ಮಶ್ರೀ ಸುಬ್ರಹ್ಮಣ್ಯ ಉಪಾಧ್ಯಾಯರವರ ನೇತೃತ್ವದಲ್ಲಿ ಉತ್ಸರ್ಜನ ಚರುಹೋಮ, ದಧಿಸಕ್ತುಹೋಮಗಳನ್ನು ಮಾಡಿ ಋಗ್ವೇದದ ಹತ್ತು ಮಂಡಲಗಳ ಮೊದಲ ಹಾಗೂ ಕೊನೆಯ ಶ್ಲೋಕಗಳನ್ನು ಪಾರಾಯಣ ಮಾಡಿ ಮೊಸರು ಹಾಗೂ ಅರಳನ್ನು ಯಜ್ಞಕ್ಕೆ ಹವಿಸ್ಸನ್ನಾಗಿ ಸಮರ್ಪಿಸಲಾಯಿತು. ಗಾಯತ್ರಿ, ಪಂಚಾಕ್ಷರಿ ಅಷ್ಟಾಕ್ಷರಿ ಮಂತ್ರಗಳನ್ನು ಜಪಿಸಿ ನೂತನ ಯಜ್ಞೋಪವೀತವನ್ನು ಧಾರಣೆ ಮಾಡಲಾಯಿತು.

**ತಾ.26-08-2016ನೇ** ಶುಕ್ರವಾರ ಸಂಜೆ ಆರು ಗಂಟೆಗೆ ಸಂಘದ ವತಿಯಿಂದ ಹಾಗೂ ಮಹಿಳಾವೇದಿಕೆಯ ವತಿಯಿಂದ ಶ್ರಾವಣ ಮಾಸದ ವಿಶೇಷ ಪೂಜೆಯ ಪ್ರಯುಕ್ತ **ಸಾಮೂಹಿಕ ಹೂವಿನ ಪೂಜೆಯನ್ನು** ಶ್ರೀ ಶಾರದಾ ದೇವಸ್ಥಾನದಲ್ಲಿ ನೆರವೇರಿಸಲಾಯಿತು. ಶ್ರೀ ದೇವಿಯನ್ನು ಬೆಳ್ಳಿಯ ಪ್ರಭಾವಳಿ ಬಂಗಾರದ ಒಡವೆಗಳಿಂದ ಹಾಗೂ ಪುಷ್ಪಗಳಿಂದ ಅಲಂಕರಿಸಲಾಗಿತ್ತು . ಮಹಿಳಾ ವೇದಿಕೆಯ ಸದಸ್ಯೆಯರು ಲಲಿತಾ ಸಹಸ್ರನಾಮ ಹಾಗೂ ಸೌಂದರ್ಯಲಹರಿಯನ್ನು ಸಾಮೂಹಿಕವಾಗಿ ಪಠಿಸಿದರು. ಭಜನಾ ಸೇವೆಯೂ ನೆರವೇರಿತು. ಮಂಗಳಾರತಿಯ ನಂತರ ಸುಮಾರು ನೂರಕ್ಕೂ ಮಿಕ್ಕಿ ಭಕ್ತರು ಪ್ರಸಾದ ಸ್ವೀಕರಿಸಿದರು. ಶ್ರೀಮತಿ ಜಯಲಕ್ಷ್ಮಿ ಮುರಳಿಧರ ರಾವ್, ಶ್ರೀ ಉಷಾ ಶ್ಯಾನುಭಾಗ್ ಶ್ರೀಮತಿ ಉಷಾ ಮೋಹನ್ ದೇವ್ ಇತ್ಯಾದಿ ಮಹಿಳಾವೇದಿಕೆಯ ಸದಸ್ಯರ ಮುತುವರ್ಜಿ ಯಲ್ಲಿ ಈ ಕಾರ್ಯಕ್ರಮ ನೆರವೇರಿತು.

## ಆಸೆ

ಮಳೆಯಲ್ಲಿ ಚಿಗುರಿದ ಮೊದಲ ಸಸಿಯಂತೆ
ಮನದೊಳಗೆ ಮೂಡಿತು ಮೊದಲ ಆಸೆ।
ಭಾವನೆಗಳು ಬರಿದಾಯಿತು ಎನ್ನುವಾಗ
ಭಾವನಾ ಜೀವಿಯಾಗಿರಲೇ ಬೇಕು ಎನ್ನುವ ಸ್ಥಿತಿ ॥

- ರಶ್ಮಿ ಉಳಿಯಾರು

## ಚಿಣ್ಣರ ಅಂಗಳ





ಸ್ನಿಗ್ಧಾ, 2ನೇ ತರಗತಿ, ಮುಂಬಯಿ

With Best Compliments from :



Dr. Sanath S. Rao
M.B.B.S., M.D.(Derm, Vene, Lep)
Fellow Cosmetology (St. John's Hospital)
SKIN SPECIALIST & COSMETOLOGIST
Clinic : 0820-6529474
Mobile : 9886093199
drsanathrao@gmail.com
JALAJA SKIN CARE AND COSMETOLOGY CLINIC
Medicare Centre, Behind Pai Electronics, Court Back Road, Udupi - 576 101.
Visit us at : www.jalajaskincare.com
Timings : 9-30 a.m. to 2-00 p.m., 4-30 p.m. to 8-00 p.m.
Also available at Lalith Hospital (11-30 a.m. to 2-00 p.m.)

With Best Compliments From :



SMT. VIDYA & SRI K. VASUDEVA RAO

Deepika Digital Studio & Video
Deepika International Travels

WE UNDERTAKE
- Studio Portrait
- Digital Creation
- Outdoor Photography Making
- Digital Albums
- Video Coverage (Cinematography)
- Lamination & Frames
- Led Wall, Crane & Spot Mixing
- Air Ticket (Domestic & International)
- Passport Assitance
- Train Tickets
- Bus Tickets
- Attestation Certificate
- Western Union
- Emigration (ECNR)

Opp. Kediyoor Hotel, Near Service Bus Stand, Udupi - 576 101.
E-mail : deepika.tra@gmail.com
Ph : 0820-2520652 / 4295862 Mobile : 9845177795 / 9845650449

Owned & Published by : Sri Sthanika Dravida Brahmana Sangha (R.), Shri Sharada Mantapa, Sharada Nagara, Kunjibettu, Udupi - 576 102. Ph : 0820-2520754
Edited by Dr.Y. Sudharshan Rao Udupi, Designed @ SriNidhi Computer Graphics, Rajataadri, Manipal, Printed at Agrahara Offsets, Udupi. E-mail : srisharadaudupi@gmail.com Website : www.srisharada.org